Azim Premji Foundation

Karnataka Field Institutes | October- 2015 | Issue No.: 38

# ಬಯಲು Bayalu

*....a space of our own*



Table of Contents


1. **Love thy labor *by Peri*** .......... **3**
2. **ಬಟ್ಟಲ ತೊಟ್ಟು (Wick in a Lamp) *Poem by Hanumantharaju*** .......... **4**
3. **ನಾ ಕಂಡ ಶ್ರಮಜೀವಿ (An Ideal Labourer) *by Santoshkumar*** .......... 5
4. **ಕಾಮ್‌ಸೇ ಬಡಾಪನ ಮಿಲತಾ ಹೈ ನಾಮಸೇ ನಹೀ (Prosperity Come From Work Not By Name) *by Anwar*** .......... 6
5. **ಕಾಡುತಿದೆ ಈ ಪ್ರಶ್ನೆ? (The Question Bothers) *Poem by Satya Sakshi Tumari*** .......... 7
6. **A Labour of Love *by Kavitha B S*** .......... **7**
7. **ನಮ್ಮ ಕಾರ್ಮಿಕರು (Our Labourers) *Poem by Shrihari Kulkarni*** .......... 8
8. **The Labor and Hard work = Success in life *by Rama Devi*** .......... **9**
9. **ಸೂತಕದ ಛಾಯೆಯಲ್ಲೊಂದು ಕರಿ ನೆರಳು (Shadow of Grief) *by Hanumantharaju*** .......... 10
10. **ಶ್ರಮವೇ ಜೀವನಾ ರೀ (Life is in Labour) *by Renuka Hegganadoddi*...** .......... 11
11. **ಗಾಂಧಿ ನಮನ** (Respect to Gandhi) Poem by Channabasava Patil .......... 12
12. **The Importance of Labor *by Rajesh Mahanthmat*** .......... **13**
13. **ಶ್ರಮ (Physical Labour) *by Asha Nagaral*** .......... 14
14. **ಆಲಸ್ಯ ಮನುಷ್ಯನಿಗೆ ಹತ್ತುವ ಜಂಗು (Lethargy is the Curse of Life) *by Majhar Aasif Hebbal.*** .......... 15
15. **ದರ್ಪಣ (The Mirror) *Poem by Pradeep Kumar*** .......... 15
16. **ಶ್ರಮವೇ ಬಾಳಿನ ದಾರಿದೀಪ (Labour is the Light of Life) *by Kavita Kulkarni*** .......... 16
17. **ಶ್ರಮಿಕನ ಕವಿತೆ (The Poem of Labourer) *Poem by Raghavendra Herle*** .......... 17
18. **ಕಸ್ತೂರಬಾ ಗಾಂಧಿ ಮತ್ತು ಶ್ರಮ (Labour and Kasturba Gandhi) *by Girish Patil*** .......... 19
19. **ಕೌದಿಯ ಹಿಂದಿನ ಶ್ರಮ (Labour behind the Koudi) *by Gundappa Katekar*** .......... 20
20. **ಶ್ರಮ (Labour) *by Shambanna Kudligi*** .......... 21
21. **Cool Clicks *by Guru Moger*** .......... **22**




## 1. Love thy labor

***- Peri***

It was very unusual for a conductor to be so friendly. That man started from Adugodi and till he reached Majestic was alerting people of the next stop and helping people with luggage to manage it. He was speaking to elders in a nice way and attending to them. Proactively getting seats for women with young children. He was amazing. And in addition he had some interesting things to announce about some of those stops. That was in 1983 when I came to Bangalore looking for a job. What was interesting was that he did this consistently. Whenever I had the chance to get into his bus during my month long stay he was doing this. This bus conductor was not only doing his job well but, working hard to make it interesting for him and others.



Paddu's tea center. Probably he is Padmanabha. The surrounding is ugly. The building is old and worn out. It is road side and a lot of trash was laid in the surrounding. But, people throng to his tea center. He prepares extraordinary good tea. I having started my career as tea powder sales person, will vouch for the quality of his tea. No special teas, only Paddu's tea! There aren't many items there. Only tea, coffee, biscuits and bun. But, the most important thing is that, in the ugliest surrounding Paddu can maintain a very clean tea Shop. He comes very early and cleans the surrounding himself, with no assistance. And during this cleaning he does not entertain any customers. He prepares tea on demand. Preparing tea-cleaning-preparing tea-cleaning is a continuous process. Paddu maintains both the quality of his tea and the cleanliness of the place through his sheer hard work.




In Yashavanthpur market there is this butcher who cuts the meat so well that you cannot remove your eyes from his hands. I love to watch him work. He can cut the meat to any size and any form like an artist. He mesmerizes you with his hand work. He works with a huge and heavy looking sharp knife. As he and you focus on that piece of meat on the wood, he works on the meat. The knife looks like a brush in an artist's hand. The rough hands of the butcher metamorphoses into delicate fingers of a caring nurse. The cuts are made in such a way that it does not cause any pain to the piece of meat in his hand. What smoothness and what grace is there in his hands. But if you slowly look up to his face you will see sweat dripping down. The focus, concentration and total control for that smoothness and grace needs a lot of practice and energy. It is hard work.

The news that Vittamami is mentally disturbed in Mumbai shocked me. Not only was me, my entire village was shocked by. What a powerful woman she was. She was the epitome of courage and strength in our village. Losing her husband very early, and the only child running away to Mumbai, she stayed single and alone back in our village. She was a landless laborer. She worked very hard and developed very good skills in agriculture. Hence, she was always in demand for her hard and skilled work. Naturally she became a leader in everything. She earned some money, saved it and would help others, of course with a nominal interest.

Nobody dared to cheat with her money. She was virtually a street fighter. Since she did not have any responsibilities, she was there to help anyone in need. That is how she was a 'mami' (aunty) for the entire village. Recently, her grandchildren purchased a flat in Mumbai and they wanted to take her there. She said



NO! She said, “What will I do there. Sit quite! How can I sit quite like a doll? I have to work. I am not coming”. And the entire village said, “How could mami be alive without work?” Many tried convincing her son to leave her in the village. They went to the extent of saying that they would look after her when she would fall sick. But, her son forcibly took her to Mumbai. After six months we got this shocking news. After a few weeks they brought her back to our village. She looked very depressed. She could not move, within a week she passed away. And the entire village retorted, “How could mami live without work?” How true!

***

## 2. ಬಟ್ಟಲ ತೊಟ್ಟು

*– ಹನುಮಂತರಾಜು*

ಧರಣಿಯ ಮಡಿಲಲಿ ಜನಿಸಿದೆ ನಾನು
ಕೊಟ್ಟಿಗೆಯೊಳಗೆ ಸಗಣಿಯ ಬಳಿಯಲು
ಗೊಬ್ಬರ ತಿಪ್ಪೆಯ ಹಸಿ ಬಿಸಿ ವಾಸನೆ
ತೆವಳುವ ಗೊಣ್ಣೆಯ ಹುಳುವಿನ ಹಾಗೆ

ಹಾರುವ ಚಿಟ್ಟೆಯ ಕೈ ಬೀಸಿ ಕರೆವೆ
ಬಣ್ಣವ ಎಣಿಸಿ ನಲಿಯುತ ಕುಣಿಯಲು
ಕೋಗಿಲೆಯೊಂದಿಗೆ ಕಂಠವ ಸೇರಿಸಿ
ಬೆವರಿನ ಹನಿಯನು ಒರೆಸುತ ಹಾಡುವೆ


ಚಪ್ಪಲಿ ಇಲ್ಲದ ಪಾದವ ಸವೆಸುತ
ಉರಿಯುವ ಸೂರ್ಯನೆ ನೆತ್ತಿಗೆ ಕನ್ನಡಿ
ಗುಡಿಸಲೆ ಅರಮನೆ ಗರತಿಗೆ ಸೆರೆಮನೆ
ಮೂಗುದ್ದ ದಾರ ಮೂರ್ತಿಗೆ ಚಿಕ್ಕದು

ಅಗಳು ಅನ್ನಕ್ಕೆ ತೆವಳುವ ಮಂದಿ
ತಂಗಳು ಮುದ್ದೆಗೆ ಗಂಗಳ ಸಾರು
ಹೆಸರಲ್ಲಿ ಬೆಣ್ಣೆ ಮೊಸರಲಿ ಕಲ್ಲು
ಜಾತಿಗೆ ಬಿದ್ದರು ನೀತಿಗೆ ಸೋಲರು

ಜಗುಲಿಯ ಮೇಲೆ ಹಸಿರೆಲೆ ಹುಲ್ಲು
ಗೂಟಕ್ಕೆ ಧಾರ ಪಾತಕ್ಕೆ ಬಾರ
ಅಂಬಾ ಕರೆದೊಡೆ ಹುಂಬದಲ್ಲೋಡುವೆ
ಜಂಗಮ ವಾಣಿಯ ಬಿಂಕದಿ ನೆನೆಯುತ

ಬಡಗಿಯ ಮನೆ ಮುಂದೆ ಸಿಬಿರಿನ ತೋರಣ
ಪೋಣಿಸಲಾಗದು ಟಣ್ ಟಣ್ಣ ಜೇಂಕಣ
ಕೊಬ್ಬರಿ ಬೆಲ್ಲಕೆ ಹಾರ ತುರಾಯಿಯೆ?
ಬಿನ್ನಾಣ್ಣಾಗಿತ್ತಿಲಿ ಕರಗಿದೆ ಒಣ ಜಂಬ

ಗುಡ್ಡವ ಹತ್ತಲು ಬಡ್ಡಿಯ ಕೇಳ್ವರು
ಜಾತಕ ತೆಗೆದರೆ ಪಶುಪತಿ ಮರಣ
ರುಚಿಗೆ ಸಿಗದು ಕೇಳೋ ಬಸಣ್ಣ
ಬಡಾಯಿ ಬಿಡುವರು ದೋಚಿ ಹೋದೋರು



***

# 3 ನಾ ಕಂಡ ಶ್ರಮಜೀವಿ

*– ಸಂತೋಷಕುಮಾರ. ಎಸ್. ಸಿ*



ಈ ಜಗತ್ತಿನಲ್ಲಿ ಲಕ್ಷ್ಯಾಂತರ ಜನರು ಒಂದೊತ್ತಿನ ತುತ್ತಿಗಾಗಿ ದಿನವಿಡಿ ಶ್ರಮಿಸುವವರು ಇದ್ದಾರೆ. ಅವರನ್ನು ನಾವು ಹತ್ತಿರದಿಂದ ನೋಡಿರುವುದಿಲ್ಲ. ನೋಡಿದರು ಅವರನ್ನು ಮತ್ತು ಅವರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಕೆಲವೊಮ್ಮೆ ಅವರಿಗೆ ನಾನೊಬ್ಬನೇ ಏನು ಮಾಡಲಾಗುವುದಿಲ್ಲ ಎಂಬ ವಿಚಾರವನ್ನು ಮಾಡಿ ಬಿಟ್ಟು ಬಿಡುತ್ತೇವೆ. ಆದರೆ ನಮ್ಮ ದಿನನಿತ್ಯದ ಪರಿಸರದಲ್ಲಿ ನೋಡಿದ ವ್ಯಕ್ತಿಯ ಶ್ರಮವೇ ನಮಗೆ ಹೆಚ್ಚು ಎನ್ನುವ ಮನೋಭಾವ ನಮಗೆ ಬರುತ್ತದೆ. ನಾ ಕಂಡ ಶ್ರಮಜೀವಿ ನನ್ನ ತಂದೆ. ನಮ್ಮದು ಅವಿಭಕ್ತ ಕುಟುಂಬ ಮನೆಯಲ್ಲಿ ನನ್ನ ದೊಡ್ಡಪ್ಪ, ದೊಡ್ಡಮ್ಮ, ಅಪ್ಪ, ಅಮ್ಮ, ಏಳು ಜನ ಅಣ್ಣಂದಿರು ಮತ್ತು ನಾಲ್ಕು ಜನ ಅಕ್ಕಂದಿರು. ನಾವು ಅವಿಭಕ್ತ ಕುಟುಂಬದಲ್ಲಿ ಬೆಳೆದಿರುವುದರಿಂದ ಅವರನ್ನು ಕಾಕಾ (ಚಿಕ್ಕಪ್ಪ) ಎಂದು ಕರೆಯುವುದು ರುಢಿಯಾಗಿದೆ. ಅವರಿಗೆ ಈಗಾಗಲೆ ಎಂಬತ್ತು ವರ್ಷಗಳಾಗಿದ್ದು, ಒಂದು ತಾಸೂ ಸುಮ್ಮನೆ ಕೂಡುವ ಸ್ವಬಾವದವರಲ್ಲ.

ಶ್ರಮಜೀವಿ ಎನ್ನುವದಾದರೆ ಅವರು ಕೆಲವೊಂದು ವಿಶಿಷ್ಟವಾದ ವ್ಯಕ್ತಿತ್ವವನ್ನು ಒಳಗೊಂಡಿರಬೇಕಾಗುತ್ತದೆ. ಅದರಲ್ಲಿ ಮುಖ್ಯವಾಗಿ ಕೆಲಸ, ವಿರಾಮದ ಬಗ್ಗೆ ಅವರ ದೃಷ್ಟಿಕೋನ, ಕೆಲಸದಲ್ಲಿ ಗೌರವ ಮತ್ತು ಬೇರೆಯವರನ್ನು ಅವಲಂಬಿಸದೇ ಇರುವುದು. ನನಗೆ ಗೊತ್ತಿರುವ ಅಂಶಗಳಲ್ಲಿ ಒಂದೆಂದರೆ, ನನ್ನ ತಂದೆಯವರು ಬೇರೆಯವರ ಮಾತಿಗೆ ತಲೆಕೆಡಿಸಿಕೊಳ್ಳದೆ ತಾನು ಆ ಕೆಲಸವನ್ನು ಮಾಡಬೇಕು ಮತ್ತು ಅದನ್ನು ಸಂಪೂರ್ಣಗೊಳಿಸಬೇಕೆಂದು ಅಂದುಕೊಂಡರೆ, ಇಂದಿಗೂ ಕೂಡಾ ತಮ್ಮ ಯೋಜನೆಯಂತೆ ತಮ್ಮ ಕೆಲಸವು ಮುಗಿಸುವವರೆಗು ಬೇರೆ ಕೆಲಸದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಆ ಕೆಲಸ ಮುಗಿದ ಮೇಲೆನೇ ಬೇರೊಂದು ಕೆಲಸದಲ್ಲಿ ತೊಡಗುತ್ತಾರೆ. ಅದೆ ರೀತಿ ಕೇಲಸಗಳನ್ನು ಹೆಣ್ಣುಮಕ್ಕಳು ಮಾಡುವ ಕೆಲಸ, ಸಣ್ಣ ಮಕ್ಕಳ ಕೆಲಸವೆನ್ನುವ ಬಾವನೆ ಅವರ ಹತ್ತಿರವಿಲ್ಲ. ಕೆಲಸದಲ್ಲಿ ಸಣ್ಣದು–ದೊಡ್ಡದು ಎನ್ನುವ ಅಂಶವನ್ನು ನನ್ನ ತಂದೆ ಎಂದಿಗು ವಿಚಾರಮಾಡಿಲ್ಲ.

ವಿರಾಮದ ಬಗ್ಗೆ ನಾವೇಲ್ಲಾ ಸಾಮಾನ್ಯವಾಗಿ ಕೆಲಸವನ್ನು ಸ್ಥಗಿತಗೊಳಿಸುವುದು ಅಥವಾ ನಿಲ್ಲಿಸುವುದು ಎಂದರ್ಥಮಾಡಿಕೊಳ್ಳುತ್ತೇವೆ. ಆದರೆ ನನ್ನ ತಂದೆಯು ಎಂದಿಗೂ ಆ ಅರ್ಥದಲ್ಲಿ ನೋಡಿಲ್ಲಾ. ಅವರ ಪ್ರಕಾರ ಕೆಲಸದಲ್ಲಿ ಬದಲಾವಣೆ ಮಾಡಿ ಬೇರೊಂದು ಕೇಲಸದಲ್ಲಿ ತೋಡಗುವುದೇ ವಿರಾಮ ಎನ್ನುವ ಅರ್ಥವಾಗಿದೆ. ವಿರಾಮದ ವೇಳೆ ಅವರು ಸಣ್ಣ–ಪುಟ್ಟ ಕೆಲಸಗಳನ್ನು ಮಾಡುತ್ತಾ ಇರುತ್ತಾರೆ. ಮನೆಯಲ್ಲಿ ಅಥವಾ ಹೋಲದಲ್ಲಿ ಊಟದ ವಿರಾಮದ ಹೊತ್ತಿನಲ್ಲಿಯು ಸಣ್ಣ–ಪುಟ್ಟ ಕೆಲಸವನ್ನು ಮಾಡುತ್ತಲೆ ಇರುತ್ತಾರೆ. (ಮೇವು ಕೋಯುವುದು, ನೀರು ತರುವುದು, ಸಾಮಾನುಗಳನ್ನು ಸೇರಿಸಿಡುವುದು,)

ಕೆಲಸದಲ್ಲಿ ಗೌರವವೆಂದರೆ ನನ್ನ ತಂದೆ ಯಾವತ್ತು ಕೆಲಸ ಮುಗಿಸುವುದರ ಬಗ್ಗೆ ಮಾತ್ರ ಚಿಂತಿಸದೆ ಆ ಕೆಲಸ ಎಷ್ಟು ಅಚ್ಚುಕಟ್ಟಾಗಿ ಆಗಿದೆ ಎನ್ನುವುದರ ಬಗ್ಗೆ ಮಾತ್ರ ಅವರು ವಿಚಾರ ಮಾಡುತ್ತಿದ್ದರು. ಉದಾ–ಹಲವು ಸನ್ನಿವೇಶದಲ್ಲಿ ಅವರು ಮನೆಯಲ್ಲಿ ಇಲ್ಲದೆ ಇದ್ದಾಗ, ಊಟದ ಸಮಯವಾದಾಗ ನಾನು ಹುಡುಕುತ್ತಾ ಇದ್ದಾಗ ನಮ್ಮ ಅಣ್ಣ ಒಂದು ಮಾತು ಹೇಳುತ್ತಿದ್ದಾ ನಿನ್ನೆ ಯಾವ ಕೇಲಸ ಮಾಡುತ್ತಿತ್ತು ಅಲ್ಲಿಯೇ ನೋಡು ಎನ್ನುತ್ತಿದ್ದನು. ಅವರು ಅದೇ ಕೇಲಸದಲ್ಲಿ ತೋಡಗಿರುತ್ತಿದ್ದರು. ಅದು ಕೇಲಸದಲ್ಲಿನ ಆಸಕ್ತಿಯನ್ನು ತೋರಿಸುತ್ತದೆ. ಎಂಬತ್ತು ವರ್ಷಗಳಾದರು ಅವರು ಮನೆಯಲ್ಲಿ ದನ–ಕರುಗಳ ಮೇಲ್ವಿಚಾರಣೆ ಮಾಡುತ್ತಾರೆ. ಹಸಿಮೇವು ಖಾಲಿಯಾಗಿತ್ತೆಂದರೆ ಹೋಲಕ್ಕೆ ಹೋಗಿ ಮೇವು ತರುತ್ತಾರೆ. ತರುವ ಮಧ್ಯ ಯಾರಾದರು ಭಾರವಾಗಿದೆ ಕೊಡು ಎಂದರು ಯಾವುದೆ ಕಾರಣಕ್ಕು ಕೋಡುವುದಿಲ್ಲ.

ನನ್ನ ತಂದೆಯ ಕೆಲವು ವಿಶಿಷ್ಟ ವ್ಯಕ್ತಿತ್ವಗಳು ನನ್ನಲ್ಲಿ ಪ್ರಭಾವವನ್ನು ಬೀರಿವೆ. ಅವುಗಳಲ್ಲಿ ಮೊದಲನೆಯದು ಕೆಲಸವಿಲ್ಲದ ಕಡೆ ಒಂದು ನಿಮಿಷವು ನಿಲ್ಲದ ವ್ಯಕ್ತಿತ್ವ ಅವರದಾಗಿದೆ. ಅವರು ಸ್ವಾಭಿಮಾನಿಯಾಗಿದ್ದು ಒಂದು ದಿನವು ಯಾರನ್ನು ಮನೆಯಲ್ಲಿ ದುಡ್ಡು ಕೇಳಿದವರಲ್ಲ. ಬಿಡುವಿನ ವೇಳೆ ಬೇರೆಯವರ ಕೆಲಸಕ್ಕೆ ಹೋಗುತ್ತಿದ್ದರು ಅದರಿಂದಲೇ ತಮ್ಮ ಕರ್ಚು ಕಳೆಯುತ್ತಿದ್ದರು. ಒಂದು ಕೆಲಸ ನಮ್ಮದೇ ಎಂದು ಗೋತ್ತಾದ ಮೇಲೆ ಆ ಕೆಲಸ ಮುಗಿಸಲು ಪ್ರಯತ್ನಿಸುತ್ತಾರೆ ಹೊರತು, ಅದರಿಂದ ನುಣುಚಿಕೊಳ್ಳಲು ಪ್ರಯತ್ನಿಸಿದ್ದನ್ನು ಅವರ ಈ ಮುಪ್ಪಿನಲ್ಲಿಯೂ ನೋಡಿಲ್ಲ. ನಮ್ಮ ದೊಡ್ಡಪ್ಪನ ಎದುರು ನಿಂತು ಮಾತನಾಡದ ಮತ್ತು ಬೀಡಿ ಸೇದುವ ಹವ್ಯಾಸವಿದ್ದರು ನಮಗೆ ಇವತ್ತಿನ ತನಕವು ಕಾಣದೇ ಇರುವುದು ಅವರು ಬೆರೆಯವರಿಗೆ ಕೊಡುವ ಗೌರವ ಮಹತ್ವದ್ದಾಗಿದೆ. ಜನರ ಜೊತೆಗೆ ಹೆಚ್ಚು ಮಾತನಾಡದ, ಸಣ್ಣ ಮಕ್ಕಳ ಮತ್ತು ಪ್ರಾಣಿಗಳ ಜೋತೆಗಿನ ಅವರ ಪ್ರೀತಿ ಎಲ್ಲರು ಮೇಚ್ಚುವಂತಹದು. ನಮ್ಮ ಹೋಲದಲ್ಲಿನ ಬಾವಿಯನ್ನು ನಮ್ಮ ತಂದೆ ಮತ್ತು ದೊಡ್ಡಪ್ಪರಿಬ್ಬರೆ ತೋಡಿದ್ದಾರೆ ಎಂದಾಗ ಸಣ್ಣವನಿರುವಾಗ ನನಗೆ ಆಚ್ಚರ್ಯವಾಗುತ್ತಿತ್ತು. ಆದರೆ ಅವರ ಕೇಲಸ ವೈಖರಿಗಳನ್ನು ನೋಡಿದ ನಂತರ ಅದು ನಿಜವೆಂದು ಗೊತ್ತಾಗುತ್ತದೆ.

(ಒಂದುವರೆ ವರ್ಷ ಅದು ಬಿಡುವಿನ ಸಂದರ್ಭದಲ್ಲಿ ಮಾತ್ರ ತೋಡಿರುವುದು) ಒಟ್ಟಾರೆ ಹೇಳುವುದಾದರೆ ಮಾಡುವ ಕೆಲಸದಲ್ಲಿ ಶ್ರಮದ ಜೋತೆ ಪ್ರೀತಿ ಇದ್ದರೆ ಮಾತ್ರ ಆ ಕೆಲಸ ಯಶಸ್ವಿಯಾಗಲು ಸಾಧ್ಯ. ಮಾಡುವ ಕೆಲಸದಲ್ಲಿ ಪ್ರೀತಿ ಕಾಣದೇ ಇದ್ದರೆ ಒಂದು ಸಣ್ಣ ಕೆಲಸ ಮಾಡಲು ನಮ್ಮ ಮನಸ್ಸು ಹೆಣಗಾಡುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದು. ಕೆಲಸದಲ್ಲಿ ನಿರತನಾದವನ ಮನಸ್ಸು ಬೇರೊಂದು ಕಡೆ ಹರಿಹಾಯದೆ ಇರುವುದರಿಂದ ಅವರ ಆರೋಗ್ಯದ ಮೇಲು ಒಳ್ಳೆಯ ಪರಿಣಾಮ ಬೀರುತ್ತದೆ. ಆ ಶ್ರಮವೇ ಅವರನ್ನು ಸಮಾಜದಲ್ಲಿ ಗುರುತಿಸುವಂತೆ ಮಾಡಿತ್ತದೆ. ಜನರಿಗೆ ನಂಬಿಕೆ ಬರುವಂತೆ ಮಾಡುತ್ತದೆ. ಮಕ್ಕಳ ಮೇಲೆ ಬಹಳ ಪ್ರಭಾವ ಬೀರುವುದು ಮನೆಯಾದ್ದರಿಂದ ಯುವ ಪೀಳಿಗೆಯಲ್ಲಿ ಈ ಎಲ್ಲಾ ಅಂಶಗಳನ್ನು ತುಂಬುವಲ್ಲಿ ಇಂತಹ ತಂದೆ–ತಾಯಿಯವರ ಮಾರ್ಗದರ್ಶನ ಅವಶ್ಯಕವಾಗಿದೆ. ಇಂತವರು ನಮ್ಮ ಸಮಾಜದಲ್ಲಿ ಅನೇಕರು ನಮ್ಮ ಸುತ್ತಮುತ್ತಲು ಇರುತ್ತಾರೆ. ಅಂತಹವರನ್ನು ನೋಡಿಯೇ ನಾವು ಅಲ್ಪ ಸಲ್ಪ ಅವರಿಂದ ಕಲಿತು ಆ ಅಂಶಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸೋಣ.



***

## 4. ಕಾಮ್‌ಸೇ ಬಡಾಪನ ಮಿಲತಾ ಹೈ ನಾಮಸೇ ನಹೀ

*– ಅನ್ವರ್.ಎಂ*



ಕಾಮಸೇ ಬಡಾಪನ ಮಿಲತಾ ಹೈ ನಾಮಸೇ ನಹೀ, ಈ ವಾಕ್ಯವನ್ನು ಗಮನಿಸಿದಾಗ ಶ್ರಮದ ಮಹತ್ವ ಗೊತ್ತಾಗುತ್ತದೆ. ನಾವು ಕೆಲಸ ಮಾಡದೆ ಬರಿ ಮಾತಿನಲ್ಲಿ ಹೇಳಿದರೆ ಸ್ವಲ್ಪ ಸಮಯ ಮಾತ್ರ ಕಳೆಯಬಹುದು, ಆದರೆ ನೈಜ ಸ್ಥಿತಿ ಗೊತ್ತಾಗಲು ಹೆಚ್ಚು ಕಾಲ ಬೇಕಾಗಿಲ್ಲ. ಶ್ರಮ ಅಂದಾಕ್ಷಣ ನಮ್ಮ ಮನಸ್ಸಿಗೆ ಬರುವುದು ಕೇವಲ ದೈಹಿಕ ಶ್ರಮ. ಆದರೆ ಅದರ ಜೊತೆಗೆ ಮಾನಸಿಕ ಶ್ರಮವು ಅಷ್ಟೆ ಪ್ರಮುಖವಾದುದು. ನಾವು ಮಾಡುವ ಯಾವುದೇ ಕೆಲಸವನ್ನು ನಾವು ಮೊದಲು ಪ್ರೀತಿಸಬೇಕು ಅಂದಾಗ ಮಾತ್ರ ನಾವು ನೆಮ್ಮದಿಯಿಂದ ಇರಲು ಸಾಧ್ಯ. ನಾವುಗಳು ನಮ್ಮ ಕೆಲಸವನ್ನು ಪ್ರೀತಿಸಿದ್ದೇ ಆದರೆ ಅದರಲ್ಲಾಗುವ ಶ್ರಮ ನಮಗೆ ಸಂತೋಷವನ್ನುಂಟು ಮಾಡುತ್ತದೆ.

ಶ್ರಮ ಅಂದಾಕ್ಷಣ ನನಗೆ ಎಲ್ಲೋ ಓದಿದ ಕಥೆ ನೆನಪಾಗುತ್ತದೆ. ಜೈಪೂರದ ಅರಸರ ಅರಮನೆಯಲ್ಲಿ ಎಲ್ಲಾ ರೀತಿಯ ಕೆಲಸಗಾರರಿಗೆ ಮಾಸಿಕ ಸಂಭಾವನೆಯ ಕೊಡುತ್ತಿರುತ್ತಾರೆ. ಅರಸನ ಮನೆಯಲ್ಲಿ ಕಟ್ಟಿಗೆ ಕಡಿಯುವವನಿಗೆ ಅರಸ ಮಾಸಿಕ ಸಂಭಾವನೆ ಕೊಡುತ್ತಾನೆ ನಂತರ ಅರಮನೆಯ ಮಂತ್ರಿಗಳಿಗೆ ಮಾಸಿಕ ಸಂಭಾವನೆಯನ್ನು ಕೊಡುತ್ತಾನೆ, ಕಟ್ಟಿಗೆ ಕಡಿಯುವವನು ಅಲ್ಲಿಯೇ ಪಕ್ಕದಲ್ಲಿರುತ್ತಾನೆ ಮಂತ್ರಿಗಳಿಗೆ ನೀಡಿದ ಸಂಭಾವನೆಯ ಚೀಲವನ್ನು ತಕ್ಷಣ ಹಿಡಿದುಕೊಂಡು ಅರಸನಲ್ಲಿ ಹೋಗುತ್ತಾನೆ, ಅರಸರೆ ದಯವಿಟು ನನಗೆ ನ್ಯಾಯ ಒದಗಿಸಬೇಕೆಂದು ಕೇಳಿಕೊಳ್ಳುತ್ತಾನೆ. ನಾನು ಸಾಕಷ್ಟು ಬೆವರು ಸುರಿಸಿ ಕಷ್ಟಪಡುತ್ತಾನೆ, ಮಂತ್ರಿಯವರು ತುಂಬಾ ಅರಾಮವಾಗಿರುತ್ತಾರೆ, ನನಗಿಂತ ಅವರಿಗೆ ಹೆಚ್ಚು ಸಂಭಾವನೆ ಯಾಕೆ? ಎಂದು ಪ್ರಶ್ನಿಸುತ್ತಾನೆ, ಅದಕ್ಕೆ ಅರಸರು ಕಟ್ಟಿಗೆ ಕಡಿಯುವನನ್ನ ಕರೆದು ಊರಾಚೆ ಒಂದು ಜನರ ಗುಂಪು ಬಂದಿದೆ ನೋಡಿಕೊಂಡು ಬರಲು ಹೇಳಿದ.

ತಕ್ಷಣ ಅವನು ಹೋಗಿ ಅರಸನಲ್ಲಿಗೆ ಬರುತ್ತಾನೆ, ಅರಸನು ಜನರ ಗುಂಪು ಯಾರೆಂದು ಪ್ರಶ್ನಿಸುತ್ತಾನೆ ಅದಕ್ಕೆ ಅವನು ಬಂಜಾರ ಸಮುದಾಯದವರು ಬಂದಿದ್ದಾರೆ, ಯಾಕೆ? ಬಂದಿದ್ದಾರೆ, ಅದಕ್ಕೆ ಅವನು ಪುನ: ಅಲ್ಲಿಗೆ ಹೋಗಿ ಕೇಳಿಕೊಂಡು ಬರುತ್ತಾನೆ, ಅರಸರೆ ಅವರು ರಾಜಧಾನಿಯಲ್ಲಿ ನೃತ್ಯ ಮಾಡಲು ಬಂದಿದ್ದಾರೆ ಎಂದು ಹೇಳುತ್ತಾನೆ, ಅದಕ್ಕೆ ಅರಸನು ಅವರು ಎಷ್ಟು ಜನರಿದ್ದಾರೆ? ಎಂದು ಕೇಳುತ್ತಾನೆ. ಅದಕ್ಕೆ ಅವನು ಪುನ: ಅಲ್ಲಿಗೆ ಹೋಗಿ ಕೇಳಿಕೊಂಡು ಬರುತ್ತಾನೆ, ಅವರು ೩೦ ಜನರಿದ್ದಾರೆ, ಅದಕ್ಕೆ ಅರಸನು ಅವರು ಎಷ್ಟುದಿನ ಇಲ್ಲಿ ಇರಬಯಸುತ್ತಾರೆ? ಅದಕ್ಕೆ ಅವನು ಪುನ: ಅಲ್ಲಿಗೆ ಹೋಗಿ ಕೇಳಿಕೊಂಡು ಬರುತ್ತಾನೆ, ಅವರು ೧೫ ದಿನಗಳವರೆಗೆ ಇರಬಯಸುತ್ತಾರೆ, ಹೀಗೆ ಅವನು ಅರಸನ ಪ್ರತಿ ಪ್ರಶ್ನೆಗೆ ಅಲ್ಲಿಗೆ ಹೋಗಿಯೇ ಬರುತ್ತಿದ್ದನು, ಇಷ್ಟು ಮಾಹಿತಿ ಕಲೆಹಾಕಲು ಅವನು ಇಡೀ ದಿನ ತೆಗೆದುಕೊಂಡನು. ನಂತರ ಅರಸರು ಮಂತ್ರಿಯವರನ್ನು ಕರೆದು ಊರಾಚೆ ಒಂದು ಜನರ ಗುಂಪು ಬಂದಿದೆ ನೋಡಿಕೊಂಡು ಬರಲು ಹೇಳಿದ, ಮಂತ್ರಿಯು ಅಲ್ಲಿಗೆ ಹೋಗಿ, ಅರಸನಲ್ಲಿಗೆ ಬಂದು ಅಲ್ಲಿಗೆ ಬಂದವರು ಬಂಜಾರ ಸಮುದಾಯದವರು, ಅವರು ೩೦ ಜನರಿದ್ದಾರೆ, ಅವರು ರಾಜಧಾನಿಯಲ್ಲಿ ನೃತ್ಯ ಮಾಡಲು ಬಂದಿದ್ದಾರೆ, ಅವರು ೧೫ ದಿನಗಳವರೆಗೆ ಇಲ್ಲಿ ಇರಲು ಬಯಸುತ್ತಾರೆ. ಇದನ್ನು ಕೇಳಿದ ಕಟ್ಟಿಗೆ ಕಡಿಯುವವನು ಆಶ್ಚರ್ಯಪಡುತ್ತಾನೆ. ಈ ಕಥೆಯನ್ನು ಗಮನಿಸಿದರೆ ಅವರವರ ಶ್ರಮಕ್ಕೆ ತಕ್ಕ ಪ್ರತಿಫಲವಿರುತ್ತದೆ, ಸುಮ್ಮನೆ ಇತರರ ಪ್ರತಿಫಲ ಗಮನಿಸಿ ನಮ್ಮ ಸಂತೋಷವನ್ನು ಹಾಳುಮಾಡಿಕೊಳ್ಳದೆ ನಮಗಿರುವ ಕಾರ್ಯವನ್ನು ಪ್ರೀತಿಪೂರ್ವಕವಾಗಿ ಮಾಡಿದರೆ ಅಷ್ಟೇ ಸಾಕು ನೆಮ್ಮದಿಯಾಗಿ ಬದುಕು ನಡೆಸಬಹುದು..

***

## 5. ಕಾಡುತಿದೆ ಈ ಪ್ರಶ್ನೆ?

***– ಸತ್ಯಸಾಕ್ಷಿ ತುಮರಿ***

ಏಕೆ ಆವರಿಸುತಲಿದೆ ಸುಮ್ಮನೆ ನಿನ್ನನು
ಯಾಕೆ ಈ ಭಾವ?
ಕುಳಿತಲ್ಲೆ ಮಲಗುತ್ತ,
ಆಲಸ್ಯದೊಳು ಮೈ ಮರೆತ
ನಿನ್ನನಾವರಿಸುತಲಿದೆ ಸೋಮಾರಿತನವು
ಏಕೋ ನಾ ಕಾಣೆ...
ಕೈ ಕೆಸರಾಗಿಸದೆ... ಶ್ರಮಪಟ್ಟು ದುಡಿಯದೆಲೆ
ಬಾಯ ಮೊಸರಾಗಿಸ ಹೊರೆಟೆ
ಈ ಭಾವ ನಿನಗೆ ತಕ್ಕ ಸ್ಥಿತಿಯೇ?
ಹಿರಿಯರಿಟ್ಟೆಜ್ಜೆಯ ಅಳಿಸಿ
ಅವರ ಮಾತನೆ ಮರೆತು
ದೂರದೂರಿಗೆ ಹೊರಟೆ...
ಜೀವ ಕೆಳೆಯಲು ತುಡಿವೆ
ಇದೆ ಏನು ನಿನ್ನ ಓದಿನೊಳ ಕಲಿಕೆ?
ಹೊನಲ ದಿಕ್ಕಲಿ ಸಾಗೋ ಕಸಕಡ್ಡಿ ನೀನಾಗಿ
ಮರೆತೆ ಏನು ನೀ ಶ್ರಮಪಟ್ಟ ಮತ್ಸ್ಯವ?

ಅಯ್ಯೋ ಮರೆತೇ ಬೆಟ್ಟೆಯಾ......ನೀನು
ನಿನ್ನ ತಂದೆ ತಾಯ್ಗಳ ಪ್ರಯತ್ನದ ಫಲವ?
ನೀನು ನೀನಾಗಿ ನಿನ್ನವರಿಗೆ ಉಸಿರಾಗಿ
ನಿಲಲಾರದೇ ಹಿಂದಡಿಯನಿಡುವ
ಹೇಡಿಯಾಗುವೆ ಏನು ಹೇಳು ನೀನು?
ಕಾಡುತಿದೆ ನನ್ನನು ನಿನ್ನ ಈ ಮೌನ
ಏಕೆ ಕಾಡುತಿದೆ ಸುಮ್ಮನೆ ನನ್ನನು
ಯಾಕೆ ಈ ಪ್ರಶ್ನೆ???



***

## 6. A Labour of Love

***- Kavitha B.S***

I have met quite a few inspirational people working in the field of education over the past years. These people are committed to the mission of social change through quality education. Such people give me the energy and motivation to continue working to strengthen the education system. I had the happy chance of meeting Mujahida madam during a school visit. She teaches in a government school in Medinacolony, Gulbarga. Her contribution to the school has been immense. She was worried about students especially girls, not enrolling in high schools after passing out of the school and wanted a high school in the community. She motivated and mobilized the community to request the authorities for the upgradation of the school to a high school. When there was considerable delay even after putting in the request, she roped in an MLA to help bring this matter into the lime light. She convinced the parents to send their children with the teachers to protest in front of the office where the request was lying dormant. Finally, the upgradation request was approved. Very often in such situations people tend to wax eloquent about the machinations of bureaucracy and give up. But Mujahida true to her name (which in Urdu means crusader) persevered and made it happen despite the inadequacies of the system.

The students adore her. Whenever she misses school for trainings or personal reasons she receives letters asking her to come back soon. The students are comfortable reaching out to her for advice on academic and personal matters. The first time I visited the school the president of the student council who I interacted with briefly, gifted to me a beautiful couplet in Urdu about me. She had written it impromptu. During my

subsequent visits to the school and interactions with Mujahida this story emerged. The girl had shown promise in Urdu poetry. Mujahida mentored her in the beginning but later on using some connection reached out to a prominent Urdu poet in Gulbarga to mentor the girl. After reviewing the girl's work and interacting with her, the poet agreed to weekly mentoring. But the girl's father was not on board. Mujahida convinced him to send the child for mentoring. The girl now has written 87 poems which her mentor and Mujahida plan to get published after she passes out of school. This has inspired other students to pursue their hobbies as well for which they seek Mujahida's support and she is always there to support her students.


Mujahida madam is committed to her students. She believes it is her responsibility to help the students build a good life. Even though she has considerable teaching experience she is open to learning. She is willing to try different practices, get out of her comfort zone if it benefits the student. She works more hours than required if the school or students need it. She coaches students at home after school when they require more support. Recently despite a personal tragedy she was in school to support students during the examinations. The sheer effort she puts in to achieve her goals is astounding. She is an amazing person and a source of inspiration for all who interact with her.



***

## 7. ನಮ್ಮ ಕಾರ್ಮಿಕರು

*– ಶ್ರೀಹರಿ ಕುಲಕರ್ಣಿ*



ಹೊಟ್ಟೆ ತುಂಬಿಸಲು ಬಿಟ್ಟಿ ಕಾಸಿಗಾಸಿಸದೆ ।
ಗಟ್ಟಿತನದಿಂದ ನಿಷ್ಠೆಯಿಂದ ದುಡಿದು ।
ಬಂದ ಪುಡಿಗಾಸಿನಲಿ ನಿಷ್ಠೆಯಲಿ ಬದುಕುವ ।
ಬಡತನದಿ ಬೆಂದವರು ಕೂಲಿ ಕಾರ್ಮಿಕರು ।॥ 1 ॥

ಊಣು, ಉಡು, ತೋಡುವ ಆಸೆ ಬಯಸಲ್ಲಿ ।
ಇರಲು ಕೂರಿಲ್ಲ ಸುಖದ ಸುಪತ್ತಿಗಿಲ್ಲ ।
ಹಗಲಿರುಳು ದುಡಿಮೆ ಇವರಿಗೆ ಆಸರೆಯು ।
ಬದುಕು ಬವಣೆಗಳ ಬಲ್ಲ ಕೂಲಿ ಕಾರ್ಮಿಕರು ।॥ 2 ॥

ಉಳ್ಳವರ ಬದುಕಿನ ಶಕ್ತಿ ಕಾರ್ಮಿಕರ ।
ಉಳ್ಳವರ ಕಣ್ಣಾಗಿ ಕುರುಡರಾಗಿಹಿರು ।
ಇರುವ ಶಕ್ತಿಯಲ್ಲ ಧಾಮರೆ ಎರೆಯುವರು ।
ನೆಮ್ಮದಿ ಸುಖನಿದ್ರೆ ಜನಕೆ ನೀಡುವರು ।॥ 3 ॥

ನಿತ್ಯ ದುಡಿಮೆಯಲಿ ರಕ್ತ ಕುದಿಸುವರು ।
ಕಾರ್ಯಚಿತ್ತದೊಳು ನಿತ್ಯ ಸಾಗುವರು ।
ಸ್ವಾರ್ಥ ಸತ್ಯ ಸೇವೆ ಗೈವರು ।
ಪರರ ಹಿತಕೆ ಶ್ರಮಿಸುವ ಕೂಲಿ ಕಾರ್ಮಿಕರು ।॥ 4 ॥

ಅನ್ನದಾತನ ಉಸಿರು ಕೂಲಿ ಕಾರ್ಮಿಕರು ।
ದೇಶದ ಚೈತನ್ಯದ ಚಿಲುಮೆಗಳಿವರು ।
ಸರ್ವ ಜನರ ಜೀವ ಸತ್ಯ ಕಾರ್ಮಿಕರು ।
ಜನ ಜೀವನದ ದೋಣಿಯ ನಾವಿಕರು ।॥ 5 ॥

## 8. The Labor and Hard work = Success in life

***- B. Rama Devi***



The mantra for success in one's life is the labor one puts in and the hardships and hard work that goes within. For a successful life, apart from the guidance and support it is even the labor that goes in to it. Life is full of twists and turns. Everyone has to struggle here in this world to overcome every obstacle in the way to success. For this hard work is necessary. Without working hard and just thinking all through will not yield anything. A mother to give birth to the child will have to go through an immense pain and hardship but at the end she forgets all the hard work, smells and tastes the success the moment she holds her little bundle of joy the baby in her arms. This is true for any achievement one gains through the life. Not all the labor put in may be fruitful always, but the experiences gained from this will even reap richer and richer in later part of the life. There may be some luck factor but not always and success is always there with hard work only and never short cut methods heed to success. The result of hard work is always fruitful.


Someone who understands life in a hard way is more experiential in all senses than who simply inherit it. While working in the field and with the AWW's, I always used to feel that what am I doing, grumbled at the tedious travel made to the Anganwadi center but in this span of over 3 years it has paid me the dividends in the form of better understanding of the field realities, developed immense patience to deal with the kids, learnt the multitasking abilities from the Anganwadi workers, imbibed the caring nature from the Anganwadi helpers and all these have shaped me to a better academic resource person as well field person which are the feathers of success to my professional life. In a general sense, success is measured by the achievement of goals. The question is who is more successful, or one who has the natural ability to succeed, or another who climbs up the ladder through hard work. Nevertheless, its counterpart, hard work is better in terms of satisfaction and gratification. There is a well-known proverb "NO pain, NO gain" hard work never goes wasted.

Although it may be later or sooner success comes to one's feet. We can have a look towards the life of great people in the world like Mahatma Gandhi, Albert Einstein, Newton, Abdul Kalam etc. they all had struggled hard throughout their life .They had made the right use of every second of life and all have tasted success in their own way of their understanding the world. Therefore, the hard work and labor that is put in is equal to the success that is achieved by one and all.

***

## 9. ಸೂತಕದ ಛಾಯೆಯಲ್ಲೊಂದು ಕರಿ ನೆರಳು

***– ಹನುಮಂತರಾಜು***



ಸೂರ್ಯನ ಕಿರಣಗಳು ಆಗತಾನೆ ಸಮುದ್ರದಲ್ಲಿ ಮಿಂದೆದ್ದು ತಣ್ಣನೆಯ ಹವೆಯನ್ನು ಸೂಯುತ್ತಾ ನಿಧಾನವಾಗಿ ಚಕ್ರಗತಿಯ ಶರವೇಗದಲ್ಲಿ ತಿರುಗಿ ಎಲೆಗಳ ಮೇಲಿನ ಇಬ್ಬನಿಯನ್ನ ಹೀರುತ್ತಾ ಸಾಗಿದ್ದಾನೆ. ಪ್ರಾತಃ ಕಾಲ ಹಕ್ಕಿಗಳ ಕಲರವ ಮನೆ ಹೆಂಚಿನ ಮೇಲಾಯ್ದು ಹೋಗುತ್ತಿವೆ. ಅವುಗಳ ಕೂಗು ಮರೆಯಗುತಿದ್ದ ಹಾಗೆ ಸೂರ್ಯನ ಬೆಳ್ಳಿ ಗೆರೆಗಳು ರಸ್ತೆಯ ಮೇಲೆ ಗೆರೆಯೊಡೆದವು. ಸುಳಿಯುವ ಗಾಳಿಗೆ ಮುಗಿಲು ಮುಟ್ಟಿವೆ ಕಿರಣಗಳು.
ಅಪ್ಪನ ಗದರುವ ಧ್ವನಿ ಕಿವಿಯ ತಮಟೆಯಮೇಲೆ ಬಡಿಯಿತು. ದುಂಬಿ ಒಮ್ಮೆ ಕಿವಿಗೆ ಹೊಕ್ಕಿ ಹಾರಿಹೋದಂಗಾಯ್ತು. ತಮ್ಮನ ಎದೆಯ ಮೇಲಿಟ್ಟ ಬಲಗೈಯನ್ನ ನಿಧಾನವಾಗಿ ಪಕ್ಕಕ್ಕೆ ಸರಿಸಿ ಬಲದ ಗಡೆ ಎದ್ದು ಎರಡು ಕೈಗಳನ್ನ ಉಜ್ಜಿ ಕಣ್ಣಿನ ಬಳಿ ತೆಗೆದುಕೊಂಡು ಬಂದು ಕರವಸ್ತ್ರೆ ಸರಸ್ವತಿ ಕರಮೂಲೆ ಸ್ಥಿತಿ ಗೌರಿ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾ ಅದರ ಅರ್ಥ ತಿಳಿಯದೆ ಹೊರ ಬಂದು ತೆಂಗಿನ ಮರ ನೋಡಿದೆ. ಮುಂಜಾನೆ ಆರು ಗಂಟೆಯ ಸಮಯ ಅಮ್ಮ ಬೇಗನೆ ಎದ್ದು ಮನೆಯ ಮುಂದೆ ರಂಗೋಲಿಯನ್ನ ತನ್ನ ಕೈ ಕುಂಚದಿಂದ ಬಿಡಿಸಿ ಅವಳ ದರ್ಶನ ಮಾಡಿಸಿದಳು. ಮುಖ ತೊಳೆದವನೆ ಕೈಚೀಲ ಹಿಡಿದು ಹೊಲದ ಕಡೆ ನಡೆದೆ. ನಾನಾಗ ಎಂಟನೆ ತರಗತಿಯ ವಿಧ್ಯಾರ್ಥಿ ಅಪ್ಪ ಅಮ್ಮ ದುಡಿದರಷ್ಟೇ ಮನೆಯಲ್ಲಿ ಹೊಲೆ ಉರಿಯಲು ಸಾಧ್ಯ. ಹೊಟ್ಟೆಗೆ ಒಂದಷ್ಟು ರಾಗಿ ಗಂಜಿ ಗೋ ಮಾತೆಯ ಮೊಸರು ರಾತ್ರಿ ನಿದ್ರೆ ಕೆಡಿಸದಂತೆ ನಮ್ಮನ್ನ ತಡೆಯುವಂತಹುಗಳು. ನಮ್ಮೂರಲ್ಲಿ ಜಮೀನಿದ್ದವರಷ್ಟೆ ಬೆಳೆ ಬೆಳೆಯುತ್ತಿದ್ದರು. ಅದರಲ್ಲಿ ತರಕಾರಿಗಳು ಬಹಳ ಮುಖ್ಯವಾಗಿದ್ದವು. ಬೆಂಡೆಕಾಯಿ ಮತ್ತು ಬದನೆಕಾಯಿ ಸುತ್ತ ಮುತ್ತಲ ಹಳ್ಳಿಯಲ್ಲಿ ಬೆಳೆಯುತ್ತಿದ್ದ ಪ್ರಮುಖ ಬೆಳೆ. ಹೂ ಅರಳಿ ಕಾಯಿ ಬಂದ ಮೇಲೆ ಅವುಗಳನ್ನ ಬಿಡಿಸಲು ಹೋಗುತ್ತಿದ್ದೆವು. ಮುಂಜಾನೆ ಆರು ಘಂಟೆಯಿಂದ ಒಂಬತ್ತರವರೆಗೆ ಕಾಯಕ ಸಾಗುತ್ತಿತ್ತು.

ಒಂದು ಎಕ್ಕರೆ ಹೊಲದಲ್ಲಿ ಬೆಂಡೆಕಾಯಿಯದ್ದೆ ಕಲರವ ಸೊಂಕು ತುಂಬಿರುವ ಗಿಡ ಲೋಳೆಯ ಹಸಿರು ಕಾಯಿ ದುಂಬಿಗಳು ಹಾರಿ ಬಂದು ಹೂವಿನ ಮಕರಂದವನ್ನ ಹೀರುತ್ತಿರುವವು ಹೆಚ್ಚಾಗಿ. ನನ್ನೊಂದಿಗೆ ಕಾಯ್ ಕೀಳಲು ಬಂದವರಿಗೆ ಹೋಲಿಸಿಕೊಂಡರೆ ನಾನೊಬ್ಬನೆ ಶಾಲೆಗೆ ಹೋಗುತ್ತಿದ್ದ ತರುಣ ಯುವಕ ಮಿಕ್ಕವರು ನಲವತ್ತು ಐವತ್ತರ ಹಾಸು ಪಾಸಿನ ಹದಿ ಹರೆಯದ ಯುವತಿಯರು. ಏಕೆಂದರೆ ಎಲ್ಲರ ಮಾತು ನಡೆದುಕೊಳ್ಳುವ ವಿಧಾನ ಎಲ್ಲವು ಪಡ್ಡೆ ಹುಡುಗರ ರೀತಿಯಲ್ಲಿಯೇ ಇದ್ದವು. ಕೆಲವು ವೇಳೆ ಅವರ ಮಾತುಗಳು ಮತ್ತು ನಡತೆ ಕಿರಿ ಕಿರಿಯನ್ನ ಉಂಟುಮಾಡಿದರೂ ಹರೆಯದ ಯುವಕರಿಗೆ ನವ ರಸಗಳ ರಸ ಭಾವದ ಕನಸಿನ ಲೋಕದ ಮೈ ಜುಮ್ಮೆನಿಸುವ ಸನ್ನಿವೇಶಗಳನ್ನ ತಂದುಕೊಡುತಿದ್ದವು. ಎಲ್ಲರೊಂದಿಗೆ ಸಮಾನ ಮನಸ್ಕನಾಗಿಯೆ ಮುನ್ನೆಡೆಯಬೇಕಾಗಿತ್ತು ಅವರ ಹಾಸ್ಯ ಧಣಿವನ್ನ ಮರೆಸಿ ಕೆಲಸದ ಹುರುಪನ್ನ ಹೆಚ್ಚಿಸುತ್ತಿತ್ತು. ಒಂದೊಂದು ಪಟದ ಸಾಲುಗಳಲ್ಲಿ ನಿಂತವರು ಕೈಯಲೊಂದು ದಬರಿಗೆಯನ್ನ ಹಿಡಿದು ಬೆಂಡೆಕಾಯಿಯನ್ನ ಮುರಿಯಲು ಪ್ರಾರಂಭಿಸಿದೆವು. ಒಂದು ಬದುವಿನಿಂದ ಕೊನೆಯ ಬದುವಿಗೆ ಹೋಗುವಷ್ಟರಲ್ಲಿ ದಬರಿಗೆ ತುಂಬುತ್ತಿತ್ತು ಅಂಚಿನಲ್ಲಿಟ್ಟಿದ ಚೀಲದಲ್ಲಿ ಸುರುವಿ ಮತ್ತೆ ಇನ್ನೊಂದು ಪಟಕ್ಕೆ ಹೊಗಬೇಕಾಗಿತ್ತು. ಅದರ ತೊಟ್ಟಿನಲ್ಲಿ ಅಂಟಿನ ಅಂಶ ಹೆಚ್ಚಾಗಿರುತ್ತಿದ್ದ ಕಾರಣ ಹಾಕಿಕೊಂಡ ಕೈಚೀಲಗಳನ್ನ ಮೃದುಗೊಳಿಸುತ್ತಿತ್ತು. ನುಣುಪಾದ ಕೈ ಬೆರಳುಗಳು ಮೂಗಿನ ಸಿಂಬಳದಲ್ಲಿ ಮಿಂದೆದ್ದಂತೆ, ಬಟ್ಟೆ ಸೋಪಿನಲ್ಲಿ ಸದಾ ನೆನೆಸಿಟ್ಟಂತೆ ಮಳೆ ಬಿದ್ದ ರಾಡಿ ರಸ್ತೆಯಲ್ಲಿ ಟ್ರ್ಯಾಕ್ಟರಿನ ಟೈರೊಂದು ಹಚ್ಚೊತ್ತಿದ ಹೆಜ್ಜೆಯ ಗುರುತಿನಂತೆ ಉಗುರಿನ ಮುಂಬಾಗ ಬಿರುದುಕೊಂಡಿದ್ದವು.

ಕಣ್ಣಂಚಿನ ಕೊನೆಯಿಂದ ಮೇಲೆದ್ದ ಸೂರ್ಯನ ಕಿರಣಗಳು ಹಂಡೆಗೆ ಆಗತಾನೆ ಇಟ್ಟ ಬೆಂಕಿ ಕೊಳ್ಳಿಯ ಬೆಚ್ಚನೆಯ ಅನುಭವ ತಂದುಕೊಡುತ್ತಿತ್ತು. ಮೂರು ತಾಸಿಕ ಕೆಲಸಕ್ಕೆ ಸಿಗುತಿದ್ದದ್ದು ಹತ್ತು ರೂಪಾಯಿ ಕೂಲಿ ಮಾಲಿಕನ ನಸೀಬು ಚೆನ್ನಾಗಿದ್ದರೆ ಆ ದಿನ ಕುಡಿಯಲು ಒಂದು ಲೋಟ ಟೀ ಇಲ್ಲದಿದ್ದರೆ ಬಗ್ಗಡದ ನೀರೆ ಗತಿ. ಹತ್ತು ರೂಪಾಯಿ ಸಿಕ್ಕರೆ ನೂರು ಪಟ್ಟು ಹೆಚ್ಚು ಖುಷಿಯಾಗುತ್ತಿತ್ತು ಅದರಲ್ಲಿ ಐದು ರೂಪಾಯಿ ನನ್ನ ಓದಿನ ಖರ್ಚಿಗೆ ಮೀಸಲು ಒಂದು ರೂ ದೇವರ ಹುಂಡಿಗೆ, ಮೂರು ರೂ ಅಮ್ಮನ ಮಡಿಲಿಗೆ, ಮಿಕ್ಕ ಒಂದು ರೂಪಾಯಿಯನ್ನ ಆ ದಿನ ಬಟಾಣಿ ಮತ್ತು ಕಡಲೆ ಕಾಯಿ ತಿನ್ನಲು ನಮ್ಮೂರಿನ ಗಿರಿಯಮ್ಮನ ಅಂಗಡಿಯ ಗಲ್ಲಕ್ಕೆ ಮೀಸಲ್ಲಿಟ್ಟಿದ್ದೆ.

ಒಂದಷ್ಟು ಕಾಯಕ ಅದರೊಂದಿಗೆ ಉಲ್ಲಾಸ ಎರಡೂ ಕೂಡ ಬದುಕಿಗೆ ಅನಿವಾರ್ಯ ಒಂದಕ್ಕೊಂದು ಬೆಸೆದ ಕೊಂಡಿಗಳು. ಮನುಷ್ಯನಿಗೆ ಅಗತ್ಯವಾದುದು ಮೂಲಭೂತವೆಂಬುದು ಸಿಗದಿದ್ದಾಗ ಅದರಲ್ಲೂ ವಿದ್ಯಾರ್ಥಿಯ ದೆಸೆಯಲ್ಲಿ ಬೇಕಾಗಿರುವಂತಹುಗಳು ಅವಶ್ಯಕವೆನಿಸಿದಾಗ ಅದರೆಡೆಗೆ ನಾವು ಸಾಗಬೇಕಾಗುತ್ತದೆ. ಸಾಗುತ್ತಾ ಅದನ್ನ ಪಡೆಯಲು ಪ್ರಯತ್ನಿಸಬೇಕಾಗುತ್ತದೆ. ಬದುಕಿನ ಎಲ್ಲಾ ಮಜ್ಜಲುಗಳು ಅಡಗಿರುವುದು ಪ್ರಯತ್ನದಿಂದಲೇ ಎಂದು ಹೇಳುತ್ತಿದ್ದ ನನ್ನ ತಂದೆಯ ಅಮೃತತ್ವದ ನುಡಿಗಳು ಇನ್ನೂ ಕಿವಿಯಲ್ಲಿ ಗೂಯ್ ಗುಡುತ್ತಿವೆ. “ಆಳಾಗಿ ದುಡಿ ಅರಸನಾಗಿ ಓದು” ಎಂಬುದನ್ನ ಮಾರ್ಪಡಿಸಿಕೊಂಡ ಅನಿವಾರ್ಯತೆಯ ನುಡಿಗಳು. ಮುಂದಿನ ನನ್ನ ಎಲ್ಲಾ ವಿದ್ಯಾಭ್ಯಾಸಗಳು ಕೆಲಸದ ಜೊತೆಯಲ್ಲಿಯೆ ಸಾಗಿದವು. ಮೂರು ನಾಲ್ಕು ತಾಸಿನ ಕೆಲಸದ ಕೂಲಿ ಮನೆಯ ಅವಲಂಬನೆಯನ್ನ ತಡೆಯಿತು ಬದುಕನ್ನ ಕಟ್ಟಿಕೊಳ್ಳಲು ಒಂದು ಮಾರ್ಗಸೂಚಿಯಾಯ್ತು. ಪಿತೃಪಕ್ಷದಂದು ತಂದೆಯ ಮಾರ್ಗಸೂಚಿಯನ್ನ ನೆನೆದು ಕಣ್ಣೀರಿಟ್ಟ ಮದುರ ಕ್ಷಣಗಳು ಬದುಕಿನಲ್ಲಿ ಬರುವುದು ಒಂದೇ ಬಾರಿ ನಮ್ಮನ್ನ ಅಗಲಿರುವವರು ಸದಾ ನಮ್ಮ ಜೊತೆಗಿರುವರು ನೆರಳಿನಂತೆ. ಸಂಗೀತ ಕಠಿಣ ಹೃದಯವನ್ನು ಸಹ ಮೃದುಗೊಳಿಸುವುದಂತೆ. ತಂದೆಯ ಜೊತೆಯಲ್ಲಿ ಹೊಲ ಕುಯ್ಯಲು ಕಟ್ಟಲು, ನಾಟಿ ಮಾಡಲು, ಬಿತ್ತನೆಯಲ್ಲಿ, ಪಾತಿಮಾಡುವಲ್ಲಿ, ಗಿಡಗಳಿಗೆ ನೀರಾಯಿಸುವುದರಲ್ಲಿ, ಗಾರೆ

ಕೆಲಸ, ಗೊಬ್ಬರ ಹೊರುವುದರಲ್ಲಿ ತೊಡಗಿಸಿಕೊಂಡೆ. ಕಲಿಯುತ್ತಾ ಬೆಳೆದ ಆ ದಿನಗಳು ಮೊಗದಲ್ಲಿ ಸ್ವಲ್ಪಮಟ್ಟಿಗಾದರು ಖುಷಿಯನ್ನ ತಂದುಕೊಡುತ್ತವೆ. 'ಸ್ಟೂಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್' ಎಂದು ಹೇಳುವಾಗ 'ಲೇಬರ್ ಲೈಫ್ ಈಸ್ ಆಲ್‌ಸೋ ಲವ್ಲಿ ಲೈಫ್' ಎಂಬುದನ್ನ ನಾವು ಮರೆಯಬಾರದು. ಹಿಂದಿನ ದಿನಗಳನ್ನ ನೆನೆಯುತ್ತಾ ವಾಸ್ತವದ ಜೀವನ ನಡೆಸಬೇಕು ಎಂಬುದು ನನ್ನ ತಂದೆ ಕಲಿಸಿಕೊಟ್ಟ ಜೀವನ ಪಾಠ.

***

## 10. ಶ್ರಮವೇ ಜೀವನಾ ರೀ...

***– ರೇಣುಕಾ ಹೆಗ್ಗಣದೊಡ್ಡಿ***



ಶ್ರಮ ಶ್ರಮ ಎಂದು ಏಕೆ ಬಿಗುವೆ ಮಾನವ. ಶ್ರಮದಲ್ಲಿ ಇರುವ ನೀಜವಾದ ಜೀವನ ಅರಿತ್ತು ಬದುಕು. ನೀನ್ನಲ್ಲಿ ಇರುವ ಶ್ರಮವನ್ನು ನೋಡಿ ಬೇರೆಯವರು ಕಲಿಯಬೇಕು. ಆದರೆ ನೀನ್ನು ಮಾತ್ರ ಬೀಗದ್ದಿರು ಕಂದ. ಈ ಜೀವ ಭೂಮಿಗೆ ಬಂದ ಮೇಲೆ ಪ್ರತಿ ಒಂದಕ್ಕು ಶ್ರಮ ಪಡಲೇ ಬೇಕು. ಶ್ರಮ ಪಡದಿದ್ರೆ ಈ ಜೀವನ ಇದ್ರು ವೇಸ್ಟ ಅಲ್ವಾ ಗೆಳೆಯರೆ. ಹೇಗೆ ಅಂಥ ಯೋಚನೆ ಮಾಡ್ತಾಯಿದ್ದಿರಾ. ನಾವು ದುಡಿಬೇಕಂದ್ರೆ, ಊಟ ಮಾದಬೇಕಂದ್ರೆ, ನೀರು ಕುಡಿಬೇಕಂದ್ರೆ, ನಾವು ಅದಕ್ಕೆ ತಕ್ಕ ಮಟ್ಟಿಗೆ ಶ್ರಮ ಪಡಬೇಕು. ಹಾಗೆ ನಮ್ಮ ಜೀವನದಲ್ಲಿ. ಡಾಕ್ಟರ್, ಟೀಚರ, ಇಂಜೀನಿಯರ, ಲಾಯರ, ಇತರೆಗಳು ಆಗಬೇಕು ಅಂದ್ರೆ ಅದಕ್ಕೆ ತಕ್ಕ ರೀತಿಯಲ್ಲಿ ನಾವು ಶ್ರಮ ಪಟ್ಟು ಹಗಲು ರಾತ್ರಿ ಎನ್ನದೆ, ಓದಬೇಕು ಅಲ್ವಾ. ನಾವು ಓದಿದರೆ ಜಾಣರು ಆಗುತ್ತೇವೆ. ಓದದ್ದಿದರೆ ದಡ್ಡರಾಗುತ್ತೇವೆ. ಆದರೆ ಈ ಓದು ಅನ್ನೊದು ಅಷ್ಟು ಸುಲಭವಾಗಿ ತಲೆಗೆ ಹತ್ತುವುದಿಲ್ಲ. ಅದಕ್ಕೆ ತಕ್ಕ ರೀತಿಯಲ್ಲಿ ನಾವು ಶ್ರಮ ಪಡಬೇಕು ಆಗ ನಮ್ಮಗೆ ವಿದ್ಯೆ ತಲೆಗೆ ಅತ್ತುತ್ತೆ. ಈ ಭೂಮಿ ಮೇಲೆ ಹುಟ್ಟಿದ ಪ್ರತಿಯೊಂದು ಜೀವರಾಶಿ ಕೂಡ ಅವು ಬದುಕಬೇಕಂದ್ರೆ. ತನ್ನದೆ ಆದ ಒಂದು ರೀತಿಯಲ್ಲಿ ಶ್ರಮ ಪಟ್ಟು ತನ್ನಗೆ ಬೇಕಾದುದ್ದನ್ನು ಪಡೆದುಕೋಳ್ಳುತ್ತವೆ. ಹಾಗೆ ಈ ಮಾನವ ಜೀವ ಕೂಡ ತನ್ನಗೆಬೇಕಾಗಿದ್ದನ್ನು. ಇತರರಿಗೆ ಬೇಕಾಗಿದ್ದನ್ನು ಶ್ರಮ ಪಟ್ಟು ಪಡೆದುಕೋಳ್ಳುವದು ಮತ್ತು ಅವರಿಗೆ ದೊರೆಯುವ ಹಾಗೆ ನಾವು ನಮ್ಮ ಕೈಯಲ್ಲಿ ಆದಷ್ಟು ಶ್ರಮ ಪಡುವುದು ನೀಜವಾದ ಜೀವನಾ ರೀ..

ಉದಾಹರಣೆಗೆ: ಒಬ್ಬ ರೈತನು ಕಷ್ಟಪಟ್ಟು ಹೊಲ ಹುಳಿಮೆ ಮಾಡಿ ಬೀಜ ಬಿತ್ತಿ. ಬೆಳೆದು ಅವನು ಶ್ರಮದ ಬೆಳೆಯನ್ನು ತೇಗೆಯುತ್ತಾನೆ. ಆದರೆ ಅವನು ತೇಗೆದ ಆ ಶ್ರಮದ ಬೆಳೆಯನ್ನು ಒಬ್ಬನೆ ಉಂಡು ಮುಗಿಸುವದಿಲ್ಲ. ಅವನು ಬೆಳೆದ ಬೆಳೆ ಎಷ್ಟೋ ಜನರಿಗೆ, ಪಕ್ಷಿ, ಪ್ರಾಣಿಗಳಿಗೆ ಹೊಟ್ಟೆ ತುಂಬಿಸಿಕೋಳೊಕೆ ಆಧಾರವಾಗಿದೆ. ಹಾಗೆ ನಾವು ಮಾಡುವ ಪ್ರತಿಯೊಂದು ಕೆಲಸದಲ್ಲಿ ಕೂಡ. ಬೇರೆಯವರಿಗೆ ಉಪಯೋಗ ಆಗುವ ರೀತಿಯಲ್ಲಿ. ನಾವು ಒಳ್ಳೆಯ ದಾರಿ ಇಡಿದು ಉತ್ತಮವಾದ ಶ್ರಮವನ್ನು ಪಡಬೇಕು. ಹಾಗೆ ಒಬ್ಬಳು ಅಜ್ಜಿ ಯಾರಿಗೂ ನಾನು ಅವಲಂಬನೆ ಆಗೋದು ಬೇಡ ಎಂದು ಅವಳು ಕೋಲಿನ ಮೇಲೆ ತನ್ನ ಭಾರವನ್ನು ನಿಯಂತ್ರಿಸಿ ಅವಳು ಶ್ರಮದಿಂದ ಮುಂದೆ ಸಾಗುತ್ತಾಳೆ ಅಲ್ವಾ ಶ್ರಮ ಪಡುತ್ತೇವೆ. ಅಂಥ ಕೊಲೆ, ದರೊಡೆ, ಕಳ್ಳತ್ತನ್ನ, ಮಾಡುವದು ಅಪರಾದ. ಅಂಥ ಕಟ್ಟ ಕೆಲಸ ಮಾಡಬಾರದು ಉತ್ತಮ ಹಾದಿಯಲ್ಲಿ ನಾವು ಸಾಗಬೇಕು ಅಲ್ವಾ, ನನ್ನ ಜೀವನದಲ್ಲಿ ಶ್ರಮ ಅಂದ್ರೆ ಹೇಗ ಇರುತ್ತೆ ಅಂಥ ಅಷ್ಟೊಂದು ಗೋತ್ತಿರಲಿಲ್ಲ. ಈ ಅಜೀಂ ಪ್ರೇಮ್‌ಜೀ ಪೌಂಢೇಶನ ಸೇರಿಕೊಂಡ ಮೇಲೆ ಪ್ರತಿಯೊಂದು ವಿಷಯದಲ್ಲು. ಕಲಿಕೆ ಅನುಭವ, ಶ್ರಮ ಎಲ್ಲವು ಆಗ್ತಾಯಿದೆ. ಹೇಗೆ ಅಂಥನಾ. ಮೊದ ಮೊದಲು ನಾನು ಈ ಮಕ್ಕಳ ಮತ್ತು ತಂದೆ–ತಾಯಿಯ ಮನ ಹೋಲಿಸೊದು ಅಷ್ಟೇನ್ನು ಕಷ್ಟದ್ದು ಅಲ್ಲಾ. ಇಜಿಯಾಗಿ ಮಾಡಬಹುದು ಬಿಡು ಅಂಥ. ನಾನು ಅಂದುಕೊಂಡಷ್ಟು ಸುಲಭದ ಕೆಲಸ ಅದು ಆಗಿರಲಿಲ್ಲ. ಆ ದಾಖಲಾಗದ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಹಾಗು ಆ ಮಕ್ಕಳ ತಂದೆ–ತಾಯಿ ಮನ ಒಲಿಸಬೇಕಂದ್ರೆ ಎಷ್ಟು ಶ್ರಮ ಪಡಬೇಕು ಎನ್ನುವುದು ಆ ಮಕ್ಕಳ ಮನೆ ಭೇಟಿ ಮಾಡಿದಾಗ ತಿಳಿಯಿತ್ತು. ಆ ಮಕ್ಕಳನ್ನು ಅಷ್ಟು ಸುಲಭದಲ್ಲಿ ಶಾಲೆಗೆ ಕಳಿಸೊ ತಂದೆ–ತಾಯಿ ಕೂಡ ಅವರಲ್ಲ. ಪ್ರತಿದಿನ ಮಕ್ಕಳ ಮನೆ ಬೆಟ್ಟಿ ಮಾಡಿ ಮಾಡಿ, ಶಿಕ್ಷಣದ ಬಗ್ಗೆ ಹೇಳಿ ಹೇಳಿ ಆ ಶಾಲೆಗೆ ದಾಖಲಾಗದ ಮಕ್ಕಳಿಗೆ ಮತ್ತು ಆ ಮಕ್ಕಳ ತಂದೆ ತಾಯಿಗೆ ಮೊಟ್‌ವೆಟ್ ಮಾಡಿ ಮಕ್ಕಳಿಗೆ ಸಂಜೆ ಯುವನಿಂಗ ಕ್ಲಾಸ್ ಮುಖಾಂತರ, ೨೦ದಿನದ &೧೦ದಿನದ ಬೇಸಿಗೆ ಶಿಬಿರ ಮುಖಾಂತರ, CCW ಮುಖಾಂತರ, ಮಕ್ಕಳಿಗೆ ಆಟ, ಹಾಡು, ಕಥೆ, ಚಟುವಟಿಕೆಗಳ ಮೂಲಕ ಆ ಮಕ್ಕಳ & ಅವರ ತಂದೆ ತಾಯಿ ಮನ ಹೋಲಿಸಿ.

೬ ಶಾಲೆಗೆ ದಾಖಲಾಗದ ಮಕ್ಕಳು, ೨೩ ಶಾಲೆ ಬಿಟ್ಟ ಮಕ್ಕಳು ಮತ್ತು ೧೫ ನಿರಂತರ ಗೈರು ಹಾಜರಾದ ಮಕ್ಕಳನ್ನು ಶಾಲೆಗೆ ಸೇರಿಸಿದೆವು. ಆಗ ಅನ್ನಿಸಿತು ನನಗೆ ಮೊದಲು ಮಕ್ಕಳ ಮನೆ ಬೇಟಿ ಮಾಡಿ ಮಾಡಿ ಏನೊ ಒಂದು ತರಹ ಬೇಜಾರ ಆಗಿತ್ತು. ಆದ್ರೆ ಆ ಮಕ್ಕಳನ್ನು ಶಾಲೆಯಲ್ಲಿ ನೋಡಿದಾಗ ಅವರ ಖುಷಿ, ಸಂತೋಷ, ನವಿಲಿನ ಹಾಗೆ ಕುಣಿಯುವುದು ಹಕ್ಕಿಯ ಹಾಗೆ ಹಾರಾಡುವ ಮಕ್ಕಳನ್ನು ನೋಡಲು ಎರಡು ಕಣ್ಣು ಸಾಕಾಗುತ್ತಿರಲಿಲ್ಲ. ಹಾಗ ಅನ್ನಿಸಿತು ಶ್ರಮ ಅಂದರೆ ಹೀಗೆ ಅಂಥ. ನಾಲ್ಕು ಜನರಿಗೆ ಉಪಯೋಗ ಆಗುವ ರೀತಿಯಲ್ಲಿ ನಾವು ಶ್ರಮದಿಂದ ಕೆಲಸ ಮಾಡಿದರೆ ನಮ್ಮ ಜೀವನ ಸಾರ್ಥಕ ಅಗುತ್ತೆ ಅಲ್ವಾ. ನಾವು ಯಾವಾಗ್ಲು ಸ್ವಾರ್ತಿಗಳು ಆಗಬಾರದು. ಪ್ರೀತಿಯ ಪ್ರಜೇಗಳು ಆಗಬೇಕು. ನಿಮಗೂ ಇಷ್ಟ ಇದ್ರೆ ಮತ್ತೆಕೆ ತಡ ಮಾಡ್ತಾಯಿದ್ದಿರಾ ಗೆಳೇಯರೆ ಇವಾಗಿನಿಂದಲೇ. ನಿಮಗೆ ಆದಷ್ಟು ಶ್ರಮದಿಂದ ಕೆಲವು ಜನರಿಗೆ ಒಳ್ಳೆಯ ರೀತಿಯಲ್ಲಿ ಉಪಯೋಗ ಆಗುವ ಹಾಗೆ ಶ್ರಮ ಪಡ್ರಿ.

***

## 11. ಗಾಂಧಿ ನಮನ

– **ಚೆನ್ನಬಸವ ಪಾಟೀಲ**



**ಗಾಂಧಿ ನೀ ಗಾಂಧಿ, ಓ ಮಹಾತ್ಮನೆ**
**ಮತ್ತೇ ಹುಟ್ಟಿ ಬರಬಾರದೇ ಶಾಂತಿಧೂತನೆ**

**ಕೆಂಪು ಮುಖದ ಮದಗಜಗಳಿಗೆ ಮದವಡಗಿಸಿದ ಯೋಧನೆ**
**ಭಾರತ ಬಿಟ್ಟು ತೊಲಗೆಂದು ಘೋಂಕರಿಸಿದ ನಾಯಕನೆ**
**ಅಹಿಂಸೆಯೆಂಬ ಆಯುಧವಿಡಿದು ಹೋರಾಟವ ಮಾಡಿದೆ**
**ಭಾರತ ಮಾತೆಯ ಮಕ್ಕಳೆಲ್ಲರ ದಾಸ್ಯವನ್ನು ಕಳೆದೆ**

**ಉಟ್ಟ ಬಟ್ಟೆಯನ್ನೆಸೆದೆ ಉಣದವರ ಕಂಡು**
**ಕೋಲನಿಡಿದು ಹೊರಟುಬಿಟ್ಟೆ ಉಪ್ಪಿಗಾಗಿ ಅಂದು**
**ಅನ್ಯದೇಶ ವಸ್ತ್ರ ತ್ಯಜಿಸಿ ಕಾದಿ ಕ್ರಾಂತಿ ಮಾಡಿದೆ**
**ಶ್ವೇತ ವಸ್ತ್ರದಲ್ಲಿ ಇಡೀ ರಾಷ್ಟ್ರವನ್ನೆ ಬೆಳಗಿಸಿದೆ**

**ಅಸ್ಪೃಷ್ಯತೆಯ ಪಿಡುಗನಳಿಸಲು ನೀ ಅಂದು ಹೊರಟೆ**
**ಬಡಜನರ ಬಲಹೀನರ ಉದ್ಧಾರಕೆ ನಿಂತೆ**
**ಹಳ್ಳಿಗಳ ಪ್ರಗತಿಯೇ ದೇಶದ ಪ್ರಗತಿಯೆಂದೆ**
**ಕುಡಿತ ಜೂಜು ಬಿಟ್ಟರೆ ನೀ ಉದ್ಧಾರವೆಂದೆ**

**ಜಾತಿ ಮತದ ಭೇದವಿಲ್ಲ ನಾವೆಲ್ಲರು ಒಂದೆ**
**ಹುಟ್ಟಿನಿಂದ ಕೊನೆಯವರೆಗೆ ನಾವು ಭಾರತೀಯರೆಂದೆ**
**ನೀ ಕಂಡ ದೇಶವಿದು ರಾಮ ರಾಜ್ಯವಾಗಲಿ**
**ಅಹಿಂಸೆಯೇ ಎಲ್ಲರ ನಿತ್ಯ ಬದುಕಾಗಲಿ**

**ನಿನ್ನ ತ್ಯಾಗವೆಷ್ಟು ನೆನೆಯಲಿ ಪ್ರಾಣ ತೆತ್ತ ಹುತಾತ್ಮನೆ**
**ಕೋಟಿ ಕೋಟಿ ಹೃದಯಗಳಲಿ ನೆಲೆಸಿರುವ ರಾಷ್ಟ್ರಪಿತನೆ**
**ಅಳಿಯದಿರಲಿ ನಿನ್ನ ಹೆಜ್ಜೆ ಇತಿಹಾಸದ ಪುಟದಲಿ**
**ಸಲ್ಲುತಿರಲಿ ಸದಾ ನಿನಗೆ ಕೋಟಿ ಕೋಟಿ ನಮನ**

***

## 12. The Importance of Labor

***- Rajesh S Mahantmath***

Our elders have time and again extolled the importance of hard work and criticized laziness and inactivity. Persistent labor is the surest way to overcome the adversity and achieve success and prosperity. In his famous ***Niti***, **Chanakya** says:

*अलसस्य कुतो विद्या अविद्यस्य कुतो धनम् ।*
*अधनस्य कुतो मित्रं अमित्रस्य कुतः सुखम् ॥*

Those who are lazy cannot acquire knowledge or learn any skills, those who do not have any skills or knowledge cannot earn wealth, those who are thus devoid of wealth cannot attract friends and those who do not have any friends cannot be happy. This is a timeless truth that explains beyond doubt that hard work is the key to all accomplishments and happiness in life.

No matter how able or how powerful one may be, no one can achieve anything without any efforts. There is no such thing as free lunch in nature. This is beautifully illustrated in the following shloka from ***Hitopadesha***:

***उद्यमेन हि सिध्यन्ति कार्याणि न मनोरथैः ।***
***न हि सुप्तस्य सिंहस्य प्रविशन्ति मुखे मृगः ॥***


It means that work is accomplished only by suitable efforts and not by wishing that some miracle should happen and our desires should get fulfilled. Even if a lion is hungry, animals do not simply enter a sleeping lion's mouth.

The Holy Bible admonished the lazy and advised:

***"Go to the ant thou sluggard, consider its ways and be wise!***
**(Proverbs 6:6)**

The great American poet **Henry Wadsworth Longfellow** in his poem ***The Ladder of St. Augustine*** wrote thus:

***"The heights by great men reached and kept,***
***Were not attained by sudden flight,***
***But they, when their companions slept,***
***Were toiling upward in the night."***




Persistent labor is the surest way to overcome the adversities of life and achieve success and prosperity. Most people think that others who have achieved great things are more capable than them or luckier. They do not realize that they may have sacrificed their desire for rest and pleasure have put in more sincere efforts relentlessly to reach the pinnacle of success.

Many people, in these modern times, abhor labor, try to find short-cuts to success and succumb to temptations to do unethical things to achieve their goals. People often underestimate those who do jobs involving strenuous labor. But, they fail to recognize that it is due to such people that others in society can lead comfortable lives. We must be grateful to the farmers who toil in the fields, braving the sun and the rain to provide us our food, we must be grateful to our industry workers, masons, cobblers, barbers, technicians, craftsmen, artisans etc. for their services. We must be grateful to our soldiers who guard our nation day and night. We must be grateful to our parents as we are the products of their labor of love and to our teachers for guiding us and shaping us in to good and useful citizens.

We are habituated to getting our things done at the pressing of a switch or ringing of a bell or with the aid of modern gadgets and have developed the habit of expecting results instantly. We have reduced patience and tolerance and increased anxiety. Total lack of physical effort has resulted in a variety of health issues such as reduced appetite, asthma, obesity, diabetes, cardiac problems etc. This causes not only the loss of time and money but also agony to the affected and their dear ones.

Many people rely on divine intervention to solve their problems or fulfil their desires. Instead of working hard and putting sincere efforts, they undertake long pilgrimages and perform elaborate rituals and in spite of this if their motive is not met they end up cursing their fate. For such people, noted Marathi poet **G D Madgulkar** has written in one of his poems:

**नसे राउळी वा नसे मंदिरी, जिथे राबती हात तेथे हरी.**

(God does not reside in temples or shrines, he is in the toiling hands of the workers.)

We must avoid laziness ourselves and practice self-discipline. We must always involve ourselves in some or the other physical or mental activity as it helps us in remaining active and healthy and prevents us from getting distracted by temporary pleasures. We should uphold the dignity of labor and inculcate in our children a respect for people involved in all types of vocations and profession.

The following quote by **Voltaire** sums up the importance of labour:

***"Our labor preserves us from three great evils – weariness, vice and want."***

***

## 13. ಶ್ರಮ.

– ***ಆಶಾ ನಾಗರಾಳ***




ನಮ್ಮ ಭಾರತ ದೇಶವು ಶೇಕಡ 80% ಹಳ್ಳಿಗಳನ್ನು ಹೊಂದಿದ ದೇಶವಾಗಿದೆ. ಇಲ್ಲಿ ಕುಶಲ ಕರ್ಮಿಗಳು, ವ್ಯಾಪಾರಿಗಳು, ರೈತರು ಹಾಗೂ ಕೂಲಿ ಕಾರ್ಮಿಕರನ್ನು ಒಳಗೊಂಡಿದೆ. ಹಳ್ಳಿಗಳಲ್ಲಿ ಜನರು ಬಡತನದಿಂದ ಬಳಲುತ್ತಾರೆ. ತಮ್ಮ ಹಸಿವನ್ನು ಇಂಗಿಸಿ ಕೊಳ್ಳಲು ಶ್ರೀಮಂತರ ಹೊಲಕ್ಕೆ ಹೋಗಿ ಕೂಲಿ ಕೆಲಸ ಮಾಡಿ ತಮ್ಮ ಕೂಲಿಯ ರೂಪದಲ್ಲಿ ದೊರೆತ ಹಣವನ್ನು ತಮ್ಮ ಸಂಸಾರಕ್ಕೆ ತಂದು ಹಾಕುತ್ತಾರೆ. ಅದರಲ್ಲಿ ಹಳ್ಳಿಗಳಲ್ಲಿ ದೊಡ್ಡ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಕೆಲಸ ಹಚ್ಚುತ್ತಾರೆ. ಹಳ್ಳಿಗಳಲ್ಲಿ ಬಡವರ ಕಷ್ಟ ಹೇಳಲಾರದಷ್ಟು. ಇವರು ತುಂಬಾ ಕಷ್ಟದಿಂದ ತಮ್ಮ ಬದುಕನ್ನು ನಡೆಸುತ್ತಾರೆ. ಇವರ ಶ್ರಮ ಮುಂಜಾನೆ ಎದ್ದು ಮಕ್ಕಳಿಗೆ, ಗಂಡನಿಗೆ ಮತ್ತು ಮನೆಯವರಿಗೆಲ್ಲ ಅಡುಗೆ ಮಾಡಿ, ಬಟ್ಟೆ ಒಗೆದು, ಬೇರೆಯವರ ಹೊಲಕ್ಕೆ ಕೂಲಿ ಮಾಡುವುದಕ್ಕೆ ಮುಂಜಾನೆಯಿಂದ ಸಂಜೇಯವರೆಗೆ ಮೈ ಬಗ್ಗಿಸಿ ದುಡಿಯುತ್ತಾರೆ.ಇವರಿಗೆ ಕೇವಲ 100 ರಿಂದ 120 ರೂಪಾಯಿಗಳು ದೊರಕುತ್ತವೆ. ಪುರುಷರಿಗೆ 200ರೂ. ರಿಂದ 250 ರೂಪಾಯಿಗಳವರೆಗೆ ಕೊಡುತ್ತಾರೆ. ಆದರೆ ಪುರುಷರಿಗಿಂತ ಸ್ತ್ರೀಯರೇ ಹೆಚ್ಚಿನ ಕೆಲಸ ಮಾಡಿದರೂ, ಅವರಿಗೆ ಕಡಿಮೆ ವೇತನ ಕೊಂಡುತ್ತಾರೆ. ಅರ್ಥವಾಗದ ಸಮಸ್ಯೆಯೆಂದರೆ ಅದು ಜನರಿಗೆ ಅರ್ಥವಾಗದು.

ಕೃಷಿಯಲ್ಲಿ ಕೂಲಿ ಮಾಡದೇ ತಮ್ಮ ಸಣ್ಣ ಪುಟ್ಟ ಮಕ್ಕಳನ್ನು ರಸ್ತೆ ಕೆಲಸಕ್ಕೆ. ಕಟ್ಟಡ ಕಟ್ಟುವ ಕೆಲಸಕ್ಕೆ ಮತ್ತು ಇನ್ನಿತರ ಕೆಲಸಗಳಿಗೆ ಕಳಿಸುತ್ತಾರೆ. ಇಲ್ಲಿ ಕಷ್ಟಕರವದ ಕೆಲಸವನ್ನು ಮಾಡಿದರೂ ಕೂಡ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುದಿಲ್ಲ. ಆದರೆ ಅದಕ್ಕೆ ತುಂಬಾ ಬೆಲೆ ಇದೆ. ಹಳ್ಳಿಯಿಂದ ದೊಡ್ಡ ದೊಡ್ಡ ನಗರಗಳಿಗೆ ಹೋಗಿ ತಮ್ಮ ಬಡತನವನ್ನು ಸರಿದೂಗಿಸಿಕೊಳ್ಳುತ್ತಿದ್ದಾರೆ. ಅತಿ ಹೆಚ್ಚು ಮುಂಬೈ, ಬೆಂಗಳೂರು ನಗರಗಳಿಗೆ ಬಡವರು ಕೂಲಿ ಕೆಲಸಕ್ಕಾಗಿ ಹೋಗುತ್ತಾರೆ ಇವರು ಅಲ್ಲಿ ತಮ್ಮ ಸಣ್ಣದಾದ ಒಂದು ಜೋಪಡಿಯನ್ನು ನಿರ್ಮಿಸಿಕೊಂಡು ವಾಸಮಾಡುತ್ತಾರೆ. ಬೆಳಕಾದರೆ ಸಾಕು ಮುಂಜಾನೆಯಿಂದ ಸಂಜೆಯವರೆಗೆ ದುಡಿದು ಅಲ್ಪ ಹಣದೊಂದಿಗೆ ತಮ್ಮ ಗೂಡಿಗೆ ಮರಳುತ್ತಾರೆ. ಕೂಲಿ ಕಾರ್ಮಿಕರು ಹಾಗೂ ಕೃಷಿಕಾರ್ಮಿಕರ ಸ್ಥಿತಿ ಈ ಮೆಲಿನಂತೆ ತುಂಬಾ ಶೋಚನಿಯವಾಗಿದೆ. ಒಬ್ಬ ಬಡ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಯು. ಒದಬೇಕಾದರೆ ಹೋಲದಲ್ಲಿ ಅಥವಾ ಹೊರಗಡೆ ಕೂಲಿ ಕೆಲಸ ಮಾಡಿ ವಿಧ್ಯಾಭ್ಯಾಸ ಮಾಡುವ ಪರಿಸ್ಥಿತಿಯನ್ನು ಹೊಂದಿದೆ. ಇಲ್ಲಿ ಬಡವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗದೆ ಹೋದರು ಸಹ ಶ್ರಮಕ್ಕೆ ಸಮಾಜದಲ್ಲಿ ಅತ್ಯಂತ ಪ್ರಮುಖವಾದ ಬೆಲೆ ಇದೆ.

***

## 15. ಆಲಸ್ಯ ಮನುಷ್ಯನಿಗೆ ಹತ್ತುವ ಜಂಗು.

*– ಮಝುಜರ ಅಸೀಫ. ಖ. ಹೆಬ್ಬಾಳ.*



"ತನ್ನ ಮನಸ್ಸಿಗೆ ಜ್ಞಾನ ಹಾಗೂ ದೇಹಕ್ಕೆ ಆರೋಗ್ಯ ಲಭಿಸಬೇಕೆನ್ನುವ ಮನುಷ್ಯನು ಆಲಸ್ಯತನಕ್ಕೆ, ಐಷಾರಾಮಿ ಜೀವನಕ್ಕೆ ಮನಸೋಲಬಾರದು." ಎಂದು ಗ್ರೀಕ ತತ್ವಜ್ಞಾನಿ ಸಾಕ್ರಟಿಸ್ ಹೇಳುತ್ತಿದ್ದ. ತಾನು ಮಾಡಬೇಕಾದ ಕೆಲಸವನ್ನು ಮನುಷ್ಯನು ಮನಸ್ಸಿನಲ್ಲಿ ಉಲ್ಲಾಸ ಇರಿಸಿಕೊಂಡು, ಸಂತೋಷದಿಂದ ಶ್ರಮಪಟ್ಟು ಮಾಡಬೇಕು ಎಂಬುದು ಇದರ ತಾತ್ಪರ್ಯ.

ಶ್ರಮಪಡುವುದು ಹಾಗೂ ಆನಂದಪಡುವುದು ಎರಡೂ ಪರಸ್ಪರ ವಿರೋಧ ಎಂಬಂತೆ ತೋರುತ್ತದೆ. ಆದರೆ ಅವು ಒಂದಕ್ಕೊಂದು ಪೂರಕವಾಗಿವೆ. ಆನಂದವು ಶ್ರಮದ ಮೂಲಕವೇ ಬರುತ್ತದೆ. ಜೀವನದಲ್ಲಿ ಆನಂದ ಪಡಿಯಬೇಕೆನ್ನುವ ಮನುಷ್ಯನು ಶ್ರಮ ಪಡುವುದನ್ನು ಪ್ರೀತಿಸಬೇಕು. ಅದು ನಮಗೆ ಆನಂದ ನೀಡುವದರ ಜೊತೆಗೆ ದೇಹಕ್ಕೆ ಆರೋಗ್ಯವನ್ನು ತಂದುಕೊಟ್ಟು, ಆಲಸ್ಯತನವನ್ನು ಹೊಡೆದು ಹಾಕಿ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತದೆ. ಆಲಸ್ಯದಂತಹ ವಿಷ ಇನ್ನೊಂದಿಲ್ಲ, ಅದು ಮನುಷ್ಯನಿಗೆ ಹತ್ತುವ ಜಂಗು. ಆದರಿಂದ ಮನುಷ್ಯ ಮೆಲ್ಲ ಮೆಲ್ಲನೆ ನಶಿಸಿ ಹೋಗುತ್ತಾನೆ. ಮನುಷ್ಯನ ಆಲಸ್ಯತನವು ಅವನಲ್ಲಿ ನಿಷ್ಕ್ರೀಯತೆಯನ್ನು ತರುತ್ತದೆ. ತುರ್ಕಿ ಜನರಲ್ಲಿ ಒಂದು ಗಾದೆ ಮಾತು ಇದೆ. "ಸೈತಾನನು ಎಲ್ಲ ಜನರಿಗೂ ಆಮಿಷ ತೋರಿಸುತ್ತಾನೆ ಆದರೆ ಆಲಸಿ ಮನುಷ್ಯ ಸ್ವತ: ಸೈತಾನನಿಗೂ ಆಮಿಷ ತೋರಿಸುತ್ತಾನೆ. ಅದಕ್ಕಾಗಿಯೇ ಶ್ರಮದಲ್ಲಿ ನಿರತನಾದ ಮನುಷ್ಯನಿಗೆ ದೈಹಿಕ ಆರೋಗ್ಯದ ಜೊತೆಗೆ ವೈಚಾರಿಕ ಆರೋಗ್ಯವೂ ಇರುತ್ತದೆ. ಮನುಷ್ಯನ ಆರೋಗ್ಯಕರ ಆಲೋಚನೆಗಳು ಅವನ ಶ್ರಮದಲ್ಲಿ ಅವನಿಗೆ ಸುಖವನ್ನು ತಂದುಕೊಡಬಲ್ಲವು.

ಪ್ರತಿಯೊಬ್ಬ ಮನುಷ್ಯನು ಜೀವನದಲ್ಲಿ ಸತ್ಫಲಗಳನ್ನೇ ಸವಿಯಬೇಕೆನ್ನುತ್ತಾನೆ. ಶ್ರಮಪಡುವುದರಿಂದ ಸಿಗುವ ಫಲವು ಎಲ್ಲ ಫಲಗಳಿಂತಲೂ ಹೆಚ್ಚು ರುಚಿಕರವಾಗಿರುತ್ತದೆ. ಮನುಷ್ಯನು ಶ್ರಮಕ್ಕೆ ಕುರಿತಾದ ಗೌರವ ತನ್ನಲ್ಲಿರಿಸಿಕೊಳ್ಳಬೇಕು. ಕೆಲವರು ತಮ್ಮ ಕೈಯಿಂದ ಇನ್ನು ಕೆಲವರು ತಮ್ಮ ತಲೆಯಿಂದ ಶ್ರಮಪಡುತ್ತಾರೆ. ಒಟ್ಟಾರೆಯಾಗಿ ಪ್ರಪಂಚದಲ್ಲಿ ಪ್ರತಿಯೊಂದು ಜೀವಿಯೂ ಶ್ರಮಪಟ್ಟು ಬದುಕಬೇಕೆಂಬುದು ಸೃಷ್ಟೀಯ ನಿಯಮ. ಶ್ರೇಷ್ಠ ಜೀವ ವಿಕಸನವಾದಿಯಾದ ಡಾರ್ವಿನ್ರ ಸಿದ್ಧಾಂತದಂತೆ "ಪರಿಸರಕ್ಕೆ ಹೊಂದಿಕೊಳ್ಳದ ಜೀವಿಯು ನಶಿಸಿ ಹೋಗುತ್ತದೆ." ಅಂತೆಯೇ ಸೃಷ್ಟೀಯ ಈ ನಿಯಮಕ್ಕೆ ಹೊಂದಿಕೊಳ್ಳದ ಜೀವಿಯೂ ಸಹ ಬಹುಕಾಲ ಉಳಿಯಲಾರದು. ಇನ್ನು ಕೆಲವರು ಶ್ರಮಪಟ್ಟು ಕೆಲಸ ಮಾಡುವುದನ್ನು "ಕತ್ತೆಯ ಕೆಲಸ" ಎಂದು ಅಪಾರ್ಥಿಸುತ್ತಾರೆ. ಪ್ರತಿಭೆಯು ಪ್ರತಿಯೊಂದು ಕೆಲಸವನ್ನು ಆರಂಭಿಸಬಹುದು. ಆದರೆ ಆ ಕೆಲಸವನ್ನು ಮಾಡಲು ಅಂತಿಮವಾಗಿ ಶ್ರಮಪಟ್ಟು ಕೆಲಸ ಮಾಡುವ ಜನರಿಂದ ಮಾತ್ರ ಸಾಧ್ಯ. ಮನುಷ್ಯನಿಗೆ ತನ್ನು ಹತ್ತು ಬೆರಳುಗಳಿಗಿಂತ ಹೆಚ್ಚು ಪ್ರಾಮಾನಿಕರಾದ ಸ್ನೇಹಿತರು ಬೇರೆ ಯಾರೋಬ್ಬರೂ ಇಲ್ಲ. ಸರಿಯಾಗಿ ನಿರ್ದೇಶವಾದ ಶ್ರಮ ಸಕಾರಾತ್ಮಕ ಪರಿಣಾಮಗಳನ್ನು ತೋರಿಸಿಕೊಡುತ್ತದೆ. ನಾವು ಆಡುವ ಮಾತು ಎಷ್ಟು ದೂರ ಕೇಳುವುದೋ ನಮಗೆ ಗೊತ್ತಿಲ್ಲ ಆದರೆ ನಾವು ಮಾಡುವ ಕೆಲಸ ಮತ್ತು ಪಡುವ ಶ್ರಮ ಮಾತ್ರ ಆ ಮಾತುಗಳಿಗಿಂತಲೂ ಹೆಚ್ಚು ದೂರ ಕೇಳಿಸುತ್ತದೆ. ಮಾತಿನ ಶೂರರನ್ನು ಜನರು ನೆನೆಯುವುದಿಲ್ಲ. ಆದರೆ ಕೃತಿಶೂರರನ್ನು ಮಾತ್ರ ಜನರು ನೆನೆಯುತ್ತಾರೆ. ಒಂದು ಕುಟುಂಬದ ಇಲ್ಲವೆ, ಒಂದು ದೇಶದ ಸಮೃದ್ಧಿಯು ಪ್ರಯೋಜನಕಾರಿ ಶ್ರಮಪಡುವ ಜನರ ಸಂಖ್ಯೆಯನ್ನೇ ಅವಲಂಬಿಸಿದೆ. ಕೆಲಸ ಮಾಡದೇ ಆಲಸ್ಯದಿಂದ ಇರುವುದು ಮನುಷ್ಯನು ತನಗೆ, ತನ್ನ ಕುಟುಂಬಕ್ಕೆ, ತನ್ನ ದೇಶಕ್ಕೆ ಎಸಗುವ ಮಹಾ ದ್ರೋಹವಾಗಿದೆ. ಒಬ್ಬ ಮನುಷ್ಯನೇ ಆಗಲಿ, ಒಂದು ದೇಶವೇ ಆಗಲಿ, ತಾನು ಗಳಿಸಿದುದಕ್ಕಿಂತಲೂ ಹೆಚ್ಚಿಗೆ ಹಾಳು ಮಾಡಿದರೆ, ಆ ಮನುಷ್ಯನ, ಆ ದೇಶ ನಾಶಗೊಳ್ಳುವುದು ನಿಶ್ಚಿತ. ಶ್ರಮಪಡದೇ ಊಟ ಮಾಡಬೇಕೆನ್ನುವ ಮನುಷ್ಯನು ಸಾರ್ವಜನಿಕ ಸಂಪತ್ತನ್ನು ಕದ್ದು ಬದುಕಬೇಕೆನ್ನುತ್ತಾನೆ.

***

## 16. ದರ್ಪಣ

*– ಪ್ರದೀಪಕುಮಾರ*

ನಕ್ಕಾಗ ನಕ್ಕಿ, ಅತ್ತಾಗ ಅತ್ತಿ
ಮುನಿಸಲ್ಲು ನೀ ಬೆರತಿ
ನನ್ನನಗೆ ಬಿಂಬ ನೀ ಬಿಟ್ಟಿ
ಜಗವಿರುವುದೇ ಹೀಗೆಂದು ನೀ ತೋರಿಸಿಕೊಟ್ಟಿ


ಒಂದೊಮ್ಮೆ ನಿನ ಸವರಿ ಸರಿಯಿಲ್ಲವೆಂದೆ
ಕಣ್ಣುಜ್ಜಿ ಪುನಃ ಪುನಃ ನಿನ ಮುಂದೆ ನಿಂದೆ
ಮತ್ಯಾರು ಇಲ ನನಹಂಗ ಎಂದೆ
ಶೃಂಗಾರ ದ್ರವ ಬಳಿದು ನಾ ನಗುತಲಿದ್ದೆ



ಯಾಕಾರ ನಿನ ಸೃಷ್ಟಿಯಾಯಿತೆಂದೆ
ನನಗಾಗಿ ಇರಬೇಕು ಹೀಗೂ ಅನಕೊಂಡೆ
ಮನದಾಳಕ್ಕೊಮ್ಮೆ ತಿರುಗಿ ನನ್ನ ನಾ ಕಂಡೆ|ನಿನಗಾಗಿ ಅಲ್ಲೋ ಅದು ಜಗಕ್ಕಾಗಿ ಎಂದೆ

## 17. ಶ್ರಮವೇ ಬಾಳಿನ ದಾರಿದೀಪ

*– ಕವಿತಾ ಕುಲ್ಕರ್ಣಿ*




ಶ್ರಮ ಎಂಬ ಪದವು ಮಾನವನಿಗೆ ಪರಿಚಯವಿತ್ತು. ಆದರೆ ಇದೆ ಶ್ರಮ ಎಂದು ತಿಳಿದಿರಲಿಲ್ಲ, ಆದರೆ ಶ್ರಮ ಜೀವಿಯಾಗಿದ್ದ. ಮಾನವನು ಹುಟ್ಟಿನಿಂದಲೆ ಶ್ರಮ ಮಾಡುತ್ತಿದ್ದ ಬೇಟೆಯಾಡುವುದು. ಗಡ್ಡೆಗೆಣಸು ಹುಡುಕುವುದು, ಈ ರೀತಿಯಾಗಿ ಶ್ರಮ ಹುಟ್ಟಿ ಬೆಳೆಯಿತು. ಸರಳವಾಗಿ ಹೆಳಬೆಕು ಎಂದರೆ ದೈಹಿಕವಾಗಿ ದೇಹ ದಂಡನೆಯನ್ನು ಮಾಡುವುದೇ ಶ್ರಮ. ಶ್ರಮದ ಬಗ್ಗೆ ವಿವರಣೆ ನೀಡಬೇಕಾದರೆ ಕೆಲವು ಪೂರಾತನ ದಾಖಲೆಯೊಂದಿಗೆ ವಿವರಿಸಬಹುದು. 12ನೇಯ ಶತಮಾನದಲ್ಲಿ ಮತ್ತು 15ನೆ ಶತಮಾನದಲ್ಲಿ ಈ ಶ್ರಮದ ಕುರಿತು ಮಹತ್ವದ ವಿಚಾರಗಳನ್ನು ಹೇಳಿದ್ದಾರೆ. ಮಾನವನು ನಿತ್ಯ ಕಾಯಕದಲ್ಲಿ ತೊಡಗಿರಬೇಕು. ಫಲವನ್ನು ಅಪೇಕ್ಷಿಸದ ಶ್ರಮ ನಮ್ಮದಾಗಬೇಕು ಎಂದಿದ್ದಾರೆ. 'ಕಾಯಕವೇ ಕೈಲಾಸ'. 'ಮಾಡು ಇಲ್ಲವೆ ಮಡಿ'. 'ಆಳಾಗಿ ದುಡಿ ಅರಸನಾಗಿ ಉಣ್ಣು'. ಈ ಮಾತುಗಳು ಶ್ರಮದ ಮಹತ್ವವನ್ನು ಎತ್ತಿ ಹೇಳುತ್ತವೆ. ನಮ್ಮ ಹಳ್ಳಿಗಳಲ್ಲಿ ಜನರು ಕೃಷಿಯಲ್ಲಿ, ಮಡಿಕೆ ಮಾಡುವುದರಲ್ಲಿ, ಗಳೆ ಹೊಡಿಯುವುದು, ಬಿತ್ತುವುದು, ಮಹಿಳೆಯರು ನಾಟಿ ಹಚ್ಚುವುದು, ಕಸ ತೆಗೆಯುವುದು, ರಾಗಿಯನ್ನು ಬೀಸುವುದು ಹಾಗು ಮನೆ ಕೆಲಸದಲ್ಲಿ ತೊಡಗುವುದು ಕೂಡ ಶ್ರಮ.

ಚಿಕ್ಕಮಗುವಿನಿಂದ ಹಿಡಿದು ದೊಡ್ಡವರತನಕ ಶ್ರಮ ಪಡಲೆಬೇಕು. ಆ ಶ್ರಮವನ್ನು ನಾವು ಗುರುತಿಸಬೇಕು. ಅಂದಾಗ ಅದಕ್ಕೆ ಅರ್ಥ ಬರುವುದು. ಶ್ರಮವೆನ್ನುವುದು ತುಂಬಾ ಅಮೂಲ್ಯವಾದದ್ದು. ಹಾಗೆ ನಮ್ಮ ಹಳ್ಳಿಯಲ್ಲಿ ನಾವು ಕಿಶೋರಿಯರ ಮತ್ತು ಮಹಿಳೆಯರ ಸಭೆ ಮಾಡುವಾಗ ಎಷ್ಟೋ ಸಾರಿ ಮನೆ ಬೆಟಿ ಮಾಡಿದರೂ ಅವರು ಬರುತ್ತಿರಲ್ಲಿಲ್ಲ. ಆಗ ನಾನು ಪದೆ ಪದೆ ಅವರ ಮನೆಗೆ ಹೋಗಿ ಆ ಸಭೆ ಯಾಕೆ ಮಾಡ್ತಾಯಿದ್ದೇವೆ, ಅದರಿಂದ ಏನು ಪ್ರಯೋಜನ? ಎಂದು ಮನೆ ಭೇಟಿ ಮಾಡಿ ತಿಳಿಸಿದಾಗ, ತಾಯಂದಿರು ಮತ್ತು ಕಿಶೋರಿಯರು ನಾವು ಮಾಡುವ ಸಭೆಗೆ ಬರಲು ಆರಂಭಿಸಿದರು. ಆಗ ಆರೋಗ್ಯದ ಬಗ್ಗೆ, ವ್ಯಯಕ್ತಿಕ ಸ್ವಚ್ಚತೆ, ಹಕ್ಕುಗಳ ಬಗ್ಗೆ, ಲಿಂಗತಾರತಮ್ಯದ ಬಗ್ಗೆ ತರಬೇತಿ ನೀಡಲಾಯಿತು. ಮೊದ ಮೊದಲು ನಂಗೆ ತಾಯಂದಿರು ಮತ್ತು ಕಿಶೋರಿಯರು ಸಭೆಗೆ ಬರಲು ಒಪ್ಪದಿದ್ದಾಗ ತುಂಬಾ ಬೇಜಾರ ಆಗಿತ್ತು. ಆದ್ರೆ ನಾನು ಪದೆ ಪದೆ ಅವರ ಮನೆ ಭೇಟಿ ಮಾಡಿ ಶ್ರಮ ಪಟ್ಟಿದ್ದರಿಂದ, ತಾಯಂದಿರು ಮತ್ತು ಕಿಶೋರಿಯರು ಬರ್ತಾಯಿದ್ದಾರೆ. ಒಟ್ಟು 30 ಮಹಿಳೆಯರನ್ನು ಒಟ್ಟಿಗೆ ನೋಡಿದಾಗ ನಾನು ಪಟ್ಟ ಶ್ರಮ ಸಾರ್ಥಕ ಆಯ್ತು ಅಂಥ ಅನ್ನಿಸಿತ್ತು. ಹಾಗೆ ನನ್ನ ಜೀವನದಲ್ಲಿ ಇನೊಂದು ತುಂಬಾ ಶ್ರಮ ಹಾಕ್ಕಿದ್ದು ಅಂದ್ರೆ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸಾಯಂಕಾಲ ತರಗತಿಯನ್ನು ತೆಗೆದು ಕೊಳ್ಳುತ್ತಿರುವುದು. ಮಕ್ಕಳಿಗೆ ಆಟ, ಹಾಡು, ಚಟುವಟಿಕೆ ಮೂಲಕ ಕಲಿಸ್ತಾಯಿದೇನೆ. ಆ ಮಕ್ಕಳು ಸ್ವಲ್ಪ ಬರೆಯುವುದು, ಓದುವುದು ಕಲಿತ ನಂತರ ಮಕ್ಕಳು ಈಗ ದಿನಾಲು ಶಾಲೆಗೆ ಹೋಗುತ್ತಾ ಇದ್ದಾರೆ. ನಾನು ಪಟ್ಟ ಒಂದು ಚಿಕ್ಕ ಶ್ರಮದಿಂದ 35 ಮಕ್ಕಳಿಗೆ ಶಾಲೆಗೆ ಹೊಗಲು, ನಾಲ್ಕು ಅಕ್ಷರ ಕಲಿಯಲು ದಾರಿದೀಪವಯಿತು. ನಂಗೆ ಇಂತಹ ಒಂದು ಶ್ರಮ ಪಡುವ ಅವಕಾಶ ಕಲ್ಪಿಸಿಕೊಟ್ಟ ಅಜೀಂ ಪ್ರೇಮ್‌ಜೀ ಪೌಂಡೆಷನ್‌ಗೆ ನನ್ನ ಕೃತಜ್ಞತೆಗಳು. ಹಾಗೆ ಕೆಂಗೆರಿಯಲ್ಲಿ ಇರುವ ಮಕ್ಕಳು ಬಿಕ್ಷೆ ಬೇಡಿ ತಮ್ಮ ಜೀವನ ಸಾಗಿಸುತ್ತಿದ್ದರು. ಶಾಲೆಯ ಮುಖ ಕಾಣದೆ ಇರುವ ಮಕ್ಕಳು. ನಾವು ಆರು ತಿಂಗಳು ನಿರಂತರವಾಗಿ ಶ್ರಮ ಪಟ್ಟು ಕೆಂಗೇರಿಗೆ ಹೊಗಿ ಅಲ್ಲಿನ ಮಕ್ಕಳ ಮತ್ತು ಪಾಲಕರ ಮನವೊಲಿಸಿ ಆ ಮಕ್ಕಳಿಗೆ ಮರದ ಕೆಳಗೆ ಆಟ, ಹಾಡು ಹಾಗು ಇತರ ಚಟುವಟಿಕೆಗಳ ಮೂಲಕ ಶಾಲೆಯ ಕಡೆ ಆಕರ್ಶಣೆಯಾಗುವ ಹಾಗೆ ಮಾಡಿದೆವು. ಆ ನಂತರ ಅಧಿಕಾರಿಗಳ ಗಮನಕ್ಕೆ ಬಂದು ಕೆಂಗೇರಿಗೆ ಒಂದು ಶಾಲೆ ಬಂತು. ಆ ಶಾಲೆಯಲ್ಲಿ ಮಕ್ಕಳು ಉಳಿದು ಕೊಳ್ಳುವ ಹಾಗೆ ಆಯಿತು. ಇದು ನಾನು ಪಟ್ಟ ಶ್ರಮದ ಒಂದು ಕುರುಹು ಆಗಿ ಉಳಿಯಲು ಸಾಧ್ಯವಾಯಿತು.

***

## 18. ಶ್ರಮಿಕನ ಕವಿತೆ

*– ರಾಘವೇಂದ್ರ ಹೇರ್ಳೆ ಜಿ.*



ಶ್ರಮಿಕನ ಕವಿತೆ
ಬಿಳಿ ಹಾಳೆಯ ಮೇಲೆ ಉರುಟುರುಟಾಗಿ
ಅರಳುವ ಮುದ್ದು ಮುದ್ದನೆಯ ಅಕ್ಷರದಲ್ಲಿಲ್ಲ,
ಕಿಲುಬುಗಟ್ಟಿದ ಪಾತ್ರೆಯ ತಳದಲ್ಲಿನ
ಹಳಸಿದ ಅನ್ನದಲ್ಲಿದೆ,
ಬಿರುಕು ಬಿಟ್ಟು ಬಾಯಿ ಒಡೆದ
ಮಡಿಕೆಕುಡಿಕೆಗಳ ಕಪ್ಪನೆಯ ಮಸಿಯಲ್ಲಿದೆ,
ಗಂಜಿಕೂಳಿಗೂ ತಿಕಾಣಿ ಇಲ್ಲದ
ಹಸಿವಿನ ಆಕ್ರಂದನದಲ್ಲಿದೆ,
ಹಚ್ಚದ ಒಲೆಯ, ಕಾಣದ ಬೆಳಕಿನ
ಖಾಲಿ ಡಬ್ಬದ, ಜೇಡಗಟ್ಟಿದ ತೊಲೆಯಲ್ಲಿದೆ.
ಶ್ರಮಿಕನ ಕವಿತೆ,

ದಂತಗೋಪುರಗಳಲ್ಲಿ, ಮಹಲುಮಹಡಿಗಳಲ್ಲಿ ಇಲ್ಲವೇ ಇಲ್ಲ,
ಸೂರಿಲ್ಲದ, ಆಕಾಶವೇ ತಲೆ ಮೇಲೆ
ಕುಸಿದ ದೀನ ನೋಟದಲ್ಲಿದೆ,
ನಿತ್ಯ ನಿರಂತರವಾಗಿ ಜಿನುಗುತ್ತಾ ಬಸವಳಿಯುವ
ಬೆವರ ಹನಿಗಳಲ್ಲಿದೆ,
ಧಣಿಗಳ ಋಣಕಾಗಿ
ಸಾಯುತ್ತಾ ಬದುಕುವ ಜೀತದ ಸರಪಳಿಯಲ್ಲಿದೆ,
ಸಾಬೂನು ಕಾಣದ, ಮಾಸಿದ ಕಲೆಯ
ತೇಪೆ ಹಚ್ಚಿದ ಅಂಗಿಯ ನೆರಿಗೆಯಲ್ಲಿದೆ,
ಮೂರು ಕಾಸಿನ ಆಸೆಗಾಗಿ
ಚಾತಕ ಪಕ್ಷಿಯಂತೆ ಕಾಯುವ ಆಸೆಗಣ್ಣಿನಲ್ಲಿದೆ,
ಜಡ್ಡುಗಟ್ಟಿದ ಹೆಬ್ಬೆಟ್ಟಿನ ಅಮಾಯಕತೆಯಲ್ಲಿದೆ.
ಶ್ರಮಿಕನ ಕವಿತೆ,

ಮೋಜುಮಸ್ತಿಯ, ಕ್ಲಬ್ಬು–ಪಬ್ಬುಗಳ ಐಷಾರಾಮದಲ್ಲಿಲ್ಲ,
ದುಡಿತದ ದೇವರ ಸನ್ನಿಧಿಯಲ್ಲಿದೆ,
ನಾಳೆಗಳ ನಿರೀಕ್ಷೆಯ ಹಳವಂಡದಲ್ಲಿದೆ,
ಅವ್ವಳ ಗೂರಲು ಶಬ್ದದಲ್ಲಿ, ಅಜ್ಜನ ಪಕ್ಷವಾತದ ನರಳಿಕೆಯಲ್ಲಿ,
ಅಪ್ಪನ ಶರಾಬಿನ ಚಪಲದಲ್ಲಿ,
ಬತ್ತಾಸಿನ ರುಚಿಗೆ ಜೊಲ್ಲು ಸುರಿಸುವ
ಮಕ್ಕಳ ಕನಸಿನ ಮಂಡಿಗೆಯಲ್ಲಿದೆ,
ಅವಮಾನದ ಅಗ್ನಿಷ್ಟಿಕೆಯ ಮುಂದೆ, ಮೈಚಾಚಿ ಮಲಗಿ
ಬೀದಿನಾಯಿ ಪಾಡಾದ ಹೇವರಿಕೆಯಲ್ಲಿದೆ,
ಹೊಡೆತದ ಮೇಲೆ ಹೊಡೆತ ಬಿದ್ದು
ತುಟಿಕಚ್ಚಿ ಸಹಿಸುತ್ತಾ ಬಲಿಗೊಟ್ಟ ತನ್ನತನದಲ್ಲಿದೆ.
ಶ್ರಮಿಕನ ಕವಿತೆ,

ಹಗಲು ವೇಷದ ಬೂಟಾಟಿಕೆಯ ಥಳಕು ಬಳುಕಿನಲ್ಲಿಲ್ಲ,
ಸೋಗಿಲ್ಲದ ನಗ್ನಸತ್ಯದ,
ಕೆಸರುಮೆತ್ತಿ ರಕ್ತ ಜಿನುಗುವ ಅಂಗಾಲ ಸೀಳಿನಲ್ಲಿದೆ,
ಕಸ ಮುಸುರೆಗಳಲ್ಲಿ ಕಳೆದು ಹೋಗುತ್ತಿರುವ
ನಿಟ್ಟುಸಿರ ಬಿಸಿಯ ಬೇಗೆಯಲ್ಲಿದೆ,
ಕುಂಟನ ಹೆಗಲ ಮೇಲಿನ ಕುರುಡನ ಸವಾರಿಯ ದಿಙ್ಮೂಢತೆಯಲ್ಲಿದೆ,

ಸಾಲದ ಶೂಲದ ತಿವಿತದ ಮೊನೆಯಲ್ಲಿದೆ,
ರೈತಾಪಿ ಜನ ಬದುಕಿನ ಕೊನೆಯ ನೇಣುರುಳ ಕುಣಿಕೆಯಲ್ಲಿದೆ.
ಶ್ರಮಿಕನ ಕವಿತೆ

ದ್ರೋಹ ವಂಚನೆಗಳ ಕೃತ್ರಿಮದಲ್ಲಿಲ್ಲ,
ಭೂಗತ ಲೋಕದ ಪಾತಕದಲ್ಲಿಲ್ಲ,
ಭ್ರಷ್ಟಾಚಾರದ ಒಳಕೊವೆಗಳ ಬರ್ಬರತೆಯ ಹಗಲುದರೋಡೆಯಲ್ಲಿಲ್ಲ,
ವಾಸ್ತವದ ಕರಾಳ ಸತ್ಯಗಳ ಸಿಡಿವಗ್ನಿಕುಂಡದಲ್ಲಿದೆ,
ಆಕ್ರೋಶದ ಜ್ವಾಲಾಮುಖಿಯ ಲಾವಾರಸದಲ್ಲಿದೆ,
ತಬ್ಬಲಿತನದ, ನಿಂತ ನೆಲ ಬಿರಿದ ಪ್ರಪಾತದಲ್ಲಿದೆ,
ರೂಕ್ಷತೆಯ ಬೆಂಗಾಡಿನ ಕೆಂಧೂಳಿನಲ್ಲಿದೆ,
ಕನಸು ಕಮರಿ, ರೆಕ್ಕೆ ಸುಟ್ಟ ಮೂಕ ಹಕ್ಕಿಯ ಹಾಡಿನಲ್ಲಿದೆ,
ಬಣ್ಣ ಕಳಕೊಂಡ, ತೂತು ಬಿದ್ದ
ನಿರ್ಜೀವ ಬಾಳದೋಣಿಯ ಕುಲುಕಾಟದಲ್ಲಿದೆ,
ಬರಿದಾದ ಹೃದಯದ ಭಾವಗಳ ಗೋರಿಯಲ್ಲಿದೆ,
ಶೂನ್ಯತೆಯ ಗಾಣಚಕ್ರದ ತಿರುಗಣಿಯಲ್ಲಿ
ತೆವಳುತ್ತಾ, ಏದುಸಿರಿನಲ್ಲಿ ತೇಕುತ್ತಾ ಬಿಕ್ಕುತಿದೆ,
ಕಣ್ಣೀರ ಕೋಡಿಯಲ್ಲಿ, ಬಂಜರಿನ ಕೊಂಪೆಯಲ್ಲಿ
ಕೊಳೆಗೇರಿಯ ವ್ರಣವಾಗಿ ಪಿತಗುಟ್ಟುತಿದೆ,
ಸಾಂತ್ವನವಿಲ್ಲದ ಶೋಕ ಮೆರವಣಿಗೆಯಲಿ
ಊಳಿಡುತ್ತಾ ಆಳಿಗೊಂದು ಕಲ್ಲಾಗುತಿದೆ!!!!

***

## 19. ಕಸ್ತೂರಬಾ ಗಾಂಧಿ ಮತ್ತು ಶ್ರಮ

– *ಗಿರೀಶ ಪಾಟೀಲ*

ಶ್ರಮ ಅನ್ನೋದು ನಮ್ಮ ದುಡಿಮೆಯಲ್ಲಿ ಅಡಗಿರುವ ಸತ್ಯ. ಶ್ರಮಕ್ಕೆ ಪರ್ಯಾಯ ಪದ 'ಬೆವರು' ಎಂದರೆ ತಪ್ಪಾಗದು. ಕೆಲಸ ಮಾಡದವನಿಗೆ ಶ್ರಮದ ಅರ್ಥ ಮತ್ತು ಮಹತ್ವ ತಿಳಿಯದು. ಸೋಮಾರಿಗಳು ಇದರಿಂದ ಬಲುದೂರ. ಶ್ರಮ ಒಳ್ಳೆಯದಕ್ಕೂ ಇದೆ ಕೆಟ್ಟದ್ದಕ್ಕೂ ಇದೆ. ಫಲಿತಾಂಶ ಮಾತ್ರ ಶ್ರಮವನ್ನು ಅವಲಂಭಿಸಿರುತ್ತದೆ. ಎರಡು ರೀತಿಯಲ್ಲಿ ನಾವು ಶ್ರಮವನ್ನು ನೋಡಬಹುದು. ಫಲಾಪೇಕ್ಷೆಯನ್ನು ಬಯಸಿ ಹೊಟ್ಟೆಪಾಡಿಗೆ ಅಥವ ಜೀವನಕ್ಕಾಗಿ ಮಾಡುವ ಶ್ರಮ ಒಂದಾದರೆ, ಏನನ್ನೂ ನಿರೀಕ್ಷಿಸದೆ ಸೇವಾ ಮನೋಭಾವದಿಂದ ಪರರಿಗಾಗಿ ಮಾಡುವ ಶ್ರಮಧಾನ ಮತ್ತೊಂದು. ಸರ್ವಸಾಮಾನ್ಯರು ಒಂದನೇ ವರ್ಗದಲ್ಲಿ ಬಂದರೆ, ಎರಡನೇ ವರ್ಗದಲ್ಲಿ ಅಸಾಮಾನ್ಯರನ್ನು ಗುರುತಿಸಬಹುದು. ಗಾಂಧೀಜಿಯವರು ಈ ಎರಡನೇ ವರ್ಗಕ್ಕೆ ಸೇರುತ್ತಾರೆ. ದಕ್ಷಿಣ ಆಫ್ರೀಕಾದಲ್ಲಿ ಚಿಗುರೊಡೆದ ಸತ್ಯಾಗ್ರಹ, ಹೋರಾಟಗಳ ಯಶಸ್ಸಿಗೆ ಶ್ರಮವೇ ಕಾರಣವಾಗಿ, ಭಾರತಕ್ಕೆ ಬಂದಾಗ ಅವು ತೀವ್ರವಾದವು. ಶ್ರಮಯೇವ ಜಯತೇ ಎಂಬಂತೆ ನಾವು ಪಡೆದ ಸ್ವಾತಂತ್ರ್ಯವೇ ಇದರ ಅತ್ಯುನ್ನತ ಫಲಿತಾಂಶವಾಗಿದೆ.

ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟವು ಇಡೀ ಜಗತ್ತಿಗೇ ಪ್ರೇರಣೆ. ಅವರ ಹೋರಾಟದ ಹಿಂದೆ ಬಹುದೊಡ್ಡ ಶಕ್ತಿ ಅಡಗಿದೆ. ಅದುವೇ ಅವರ ಹೆಂಡತಿ ಕಸ್ತೂರಬಾ ಗಾಂಧಿ. ಗಾಂಧೀಜಿಯವರ ಹೋರಾಟದ ಪ್ರಚಾರದಲ್ಲಿ ಕಸ್ತೂರಬಾ ಗಾಂಧಿಯವರ ಶ್ರಮವನ್ನು ನಾವು ಗೌಣವೆಂದು ತಿಳಿಯುತ್ತೇವೆ. ಆದರೆ ಗಾಂಧೀಜಿಯವರ ಹೆಜ್ಜೆ–ಹೆಜ್ಜೆಗೆ ಕಸ್ತೂರಬಾ ಅವರ ಶ್ರಮ ತುಂಬ ಮಹತ್ವದ್ದಾಗಿದೆ. 14 ವರ್ಷದ ಕಸ್ತೂರಬಾ 13 ವರ್ಷದ ಮೋಹನದಾಸರನ್ನು ವಿವಾಹವಾಗಿದ್ದು 1883ರಲ್ಲಿ. ಸುಮಾರು 4 ವರ್ಷ ತಂದೆ ತಾಯಿಯರೊಂದಿಗೆ ಇದ್ದವರು 1887ರಲ್ಲಿ ಗಂಡನ ಮನೆಗೆ ಬರುತ್ತಾರೆ. 1897ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹೋಗುವರು. ಗಾಂಧೀಜಿಯವರೊಂದಿಗೆ ಪ್ರತಿ ಹಂತದಲ್ಲಿಯು ತೀರ ಹತ್ತಿರವಿದ್ದು ಸೇವೆಯನ್ನು ಮಾಡುತ್ತಾರೆ. ನಾಗರಿಕ ಹಕ್ಕುಗಳಿಗಾಗಿನ ಹೋರಾಟದಲ್ಲಿ ಪಾಲ್ಗೊಳ್ಳುತ್ತಾರೆ. ಫೋನಿಕ್ಸ ವಸಾಹತುಗಾಗಿನ (ಡರ್ಬನ್, ದಕ್ಷಿಣ ಆಫ್ರಿಕಾ) ಚಳುವಳಿಯಲ್ಲಿ ಹೆಚ್ಚು ತೊಡಗಿಸಿಕೊಳ್ಳುತ್ತಾರೆ. ಅಲ್ಲಿನ ಭಾರತೀಯರ ಹಕ್ಕುಗಳಿಗಾಗಿ ಬ್ರಿಟೀಷರ ವಿರುದ್ಧ ಹೋರಾಡಿ 1913ರಲ್ಲಿ ಮೂರು ತಿಂಗಳು ಸೆರೆವಾಸ ಅನುಭವಿಸುತ್ತಾರೆ. ಭಾರತದಲ್ಲಿಯು ಸಹ ಬಂಗಾಳದಲ್ಲಿ ನಡೆದ ಇಂಡಿಗೋ ಪ್ಲಾಂಟರ್ಸ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರು ಹಲವು ಬಾರಿ ಜೈಲು ಸೇರಿದಾಗ ಅಂದಿನ ಚಳುವಳಿಗಳ ನೆತೃತ್ವವನ್ನು ಕಸ್ತೂರಬಾರವರೇ ವಹಿಸಿಕೊಳ್ಳುತ್ತಿದ್ದರು. ಗಾಂಧೀಜಿಯವರಿಗೆ ಅನೇಕ ಸಂದರ್ಭಗಳಲ್ಲಿ ಸಲಹೆಕೊಟ್ಟಿದ್ದು ಇದೆ.

ಗೃಹಿಣಿಯಾಗಿ ಕಸ್ತೂರಬಾ, ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಹೋರಾಟದಲ್ಲಿ ತೊಡಗಿದಾಗ ಅವರ ಮನೆಗೆ ಪ್ರತಿದಿನ ಬರುತ್ತಿದ್ದ ಅನೇಕ ಜನರಿಗೆ ಅಡುಗೆ ಮಾಡಿ ಹಾಕಿದ್ದು, ತಿಂದದ್ದನ್ನು ತೊಳೆದಿದ್ದು ಅಲ್ಲದೆ ಕಕ್ಕಸನ್ನು ಸ್ವಚ್ಛಗೊಳಿಸಿದ್ದು ಅವರ ಬಹುದೊಡ್ಡ ಶ್ರಮವಾಗಿದೆ. ಇದರ ಜೊತೆಗೆ ನಾಲ್ಕು ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಕೂಡ ಸಂಪೂರ್ಣ ಇವರ ಮೇಲೆಯೇ ಇದ್ದದ್ದು, ಎಲ್ಲವನ್ನು ನಿಭಾಯಿಸಿಕೊಂಡು ಹೋಗುತ್ತಿದ್ದರು.

ಮಹಾತ್ಮ ಗಾಂಧೀಜಿಯವರು 33 ವಯಸ್ಸಿನವರಿದ್ದಾಗ ಬ್ರಹ್ಮಚರ್ಯವನ್ನು ಕೈಗೊಳ್ಳಲು ವೈಯಕ್ತಿಕವಾಗಿ ನಿರ್ಧರಿಸಿದಾಗಲು ಕಸ್ತೂರಬಾ ಅದಕ್ಕೆ ಮರುಮಾತಾಡದೆ ಒಪ್ಪಿಗೆ ಸೂಚಿಸಿದ್ದು ಅವರ ತ್ಯಾಗದ ಸೂಚಕ ಮತ್ತು ಗಾಂಧೀಜಿಯವರ ಹೋರಾಟದ ಬಗ್ಗೆ ಅವರಿಗಿದ್ದ ಗೌರವ. ಅಲ್ಲದೇ ತಾವೂ ಹೋರಾಟದಲ್ಲಿ ತೊಡಗಲು ಇದು ಅಡ್ಡಿಯಾದಿತೆಂದು ಸಮ್ಮತಿಸಿರಬಹುದು.

ಮಹಾತ್ಮ ಗಾಂಧೀಜಿ 2.10.1869 ರಲ್ಲಿ ಹುಟ್ಟಿದರೆ, ಕಸ್ತೂರಬಾ ಹುಟ್ಟಿದ್ದು 11.4.1869ರಂದು ಪೋರಬಂದರಿನಲ್ಲಿ. ಮಹಾತ್ಮ ಗಾಂಧೀಜಿಯವರ ಶ್ರಮಧಾನದ ಕಾರಣಕ್ಕೆ ಅವರ 150ನೇ ಜನ್ಮದಿನ ಅಂದರೆ 2019 ರವರೆಗೆ ಭಾರತ ಸರ್ಕಾರವು ಹಮ್ಮಿಕೊಂಡಿರುವ ಸ್ವಚ್ಛಭಾರತ ಅಭಿಯಾನದಲ್ಲಿ ನಾವು ಕಸ್ತೂರಬಾರನ್ನು ನೆನಪಿಸಿಕೊಳ್ಳುವುದು ಗಾಂಧೀಜಿಯವರನ್ನು ನೆನಪಿಸಿಕೊಂಡಷ್ಟೆ ಮಹತ್ವ.

***

## 20. ಕೌದಿಯ ಹಿಂದಿನ ಶ್ರಮ

***– ಗುಂಡಪ್ಪ ಕಾಟೇಕರ್***

ಶ್ರಮ ಎನ್ನುವ ಪದ ವ್ಯಕ್ತಿಯ ಬದುಕಿನೊಂದಿಗೆ ಹೊಂದಿಕೊಂಡು ಬಂದಿದೆ. ಏಕೆಂದರೆ ಯಾವುದೇ ಒಬ್ಬ ವ್ಯಕ್ತಿ ಸುಂದರವಾದ ಬಾಳನ್ನು ಕಟ್ಟಿಕೊಂಡಿದ್ದಾನೆಂದರೆ ಅದರ ಹಿಂದೆ ಅವನ/ಅವಳ ಬೆವರಿಳಿದ ಶ್ರಮವಿದೆಯಂದೇ ಅರ್ಥ. ಅಂಥ ಒಂದು ಬೆವರಿಳಿದ ಶ್ರಮದ ಕತೆ ನನ್ನ ತಂದೆ ತಾಯಿಯರದೂ ಕೂಡ ಆಗಿದೆ. ವರ್ಷದ ಮೂರು ಕಾಲಗಳಲ್ಲಿ (ಮಳೆಗಾಲ, ಚಳಿಗಾಲ ಮತ್ತು ಬೇಸಿಗೆ ಕಾಲ) ನನ್ನ ತಾಯಿಗೆ ಯಾವ ಕಾಲದಲ್ಲಿಯೂ ಕೂಡ ರಜೆ ಇರಲೇ ಇಲ್ಲ. ಅಂಥ ರಜೆಯನ್ನು ಅವಳೆಂದೂ ಬಯಸಿದ್ದೂ ಕೂಡ ಇಲ್ಲ. ಮಳೆಗಾಲ ಪ್ರಾರಂಭವಾದರೆ ಸಾಕು ಬೇರೆಯವರ ಹೊಲಕ್ಕೆ ಬಿತ್ತಲು, ಗೊಬ್ಬರ ಹಾಕಲು ಹೋಗುತ್ತಿದ್ದಳು, ಚಳಿಗಾಲದಲ್ಲಿ ಕೋಯ್ಲು ಕೆಲಸ. ಈ ಎರಡು ಕಾಲಗಳು ಮುಗಿದು ಹೋದ ಮೇಲೆ ಮಳೆಯಾಧಾರಿತ ಭೂಮಿಯಲ್ಲಿ ಯಾವುದೇ ಬೆಳೆಯನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಇಂಥ ಸಂದರ್ಭದಲ್ಲಿ ನನ್ನ ತಾಯಿ ಮನೆಯಲ್ಲಿ ಆರಾಮವಾಗಿ ಕೂಡಬಹುದಿತ್ತು. ಆದರೆ ಹಾಗೆ ಆರಾಮವಾಗಿ ಕೂಡುವಂಥ ಸ್ಥಿತಿಯೂ ಕೂಡ ನಮ್ಮ ಮನೆಯದಾಗಿರಲಿಲ್ಲ, ಜೊತೆಗೆ ಅಂಥ ಆರಾಮದ ಬಗ್ಗೆ ಎಂದು ಅಮ್ಮ ವಿಚಾರ ಮಾಡುತ್ತಲೂ ಇರಲಿಲ್ಲ. ಈ ಬೇಸಿಗೆಯಲ್ಲಿ ಅಮ್ಮ ಇನ್ನೊಬ್ಬರ ಹೊಲದಲ್ಲಿ ಕಲ್ಲುಗಳನ್ನು ಆರಿಸುವುದಕ್ಕೆ ಹೋಗುತ್ತಿದ್ದಳು. ಈ ಕೆಲಸ ಮದ್ಯಾಹ್ನ ೧ ಗಂಟೆಯವರೆಗೆ ಮಾತ್ರ ಇರುತ್ತಿತ್ತು. ನಂತರ ಬಂದು ೪ ಗಂಟೆಯಿಂದ ಮನೆಯಲ್ಲಿರುವ ಹಳೆಯ ಬಟ್ಟೆಗಳನ್ನು ಒಂದು ಕಡೆಗೆ ಸಂಗ್ರಹಿಸಿಟ್ಟಿದ್ದನ್ನು ತೆಗೆದುಕೊಂಡು, ಸಮವಾಗಿ ಅವುಗಳನ್ನು ಒಂದು ಸೈಜಿನಲ್ಲಿ ಕತ್ತರಿಸಿಕೊಂಡು ಬಣ್ಣ–ಬಣ್ಣದ ಬಟ್ಟೆಗಳೆಲ್ಲವನ್ನು ಒಂದುಗೂಡಿಸಿ, ಹಳೆಯ ಬಟ್ಟೆಗಳಿಂದ ಬಣ್ಣ–ಬಣ್ಣದ ಚಿತ್ತಾರದ ಹೊಸ ಕೌದಿಯನ್ನು ಹೊಲಿಯುತ್ತಿದ್ದಳು.



ಅವಳು ಸುಮಾರು ಒಂದು ತಿಂಗಳಿಗೊಂದರಂತೆ ೪*೭ ಅಡಿಯ ಒಂದೊಂದು ಕೌದಿಯನ್ನು ಹೊಲಿದು ಮುಗಿಸುತ್ತಿದ್ದಳು. ಬರಿ ಸರಾಗವಾಗಿ ಹೊಲಿದು ಮುಗಿಸುತ್ತಿದ್ದರೆ, ಬಹುಶಃ ೧೫ ದಿನಕ್ಕೊಂದರಂತೆ ಮುಗಿಸಬಹುದಿತ್ತೇನೊ. ಆದರೆ ಅಮ್ಮ ಹೊಲೆಯುವ ಕೌದಿ ಬಲು ಚಿತ್ತಾರದಿಂದ ಕೂಡಿರುತ್ತಿತ್ತು. ನಾಲ್ಕು ಮೂಲೆಗಳಲ್ಲಿ ಹಕ್ಕಿ ಕಾಲುಗಳನ್ನು ದಾರದಿಂದ ಬಿಡಿಸುತ್ತಾ, ಚೇಳಿನ ಕೊಂಡಿ, ಮನೆ – ಹೀಗೆ ನಾನಾ ರೀತಿಯ ಚಿತ್ರಗಳಿಂದ ಕೂಡಿರುತ್ತಿತ್ತು. ಹೊಲಿಗೆ ಎಷ್ಟು ಚಿಕ್ಕದಾಗಿ ಚೊಕ್ಕವಾಗಿರುತ್ತಿಂದರೆ, ನಾನು ಎಷ್ಟು ಕಣ್ಣರಳಿಸಿ ನೋಡಿದರು ಕೂಡ ಎಲ್ಲಿಯೂ ಸಾಲು ತಪ್ಪಿದ ಹಾಗೆ ಕಾಣುತ್ತಿರಲಿಲ್ಲ. ಹೀಗೆ ಕೌದಿಯನ್ನು ಹೊಲಿಯುವ ಸಂದರ್ಭದಲ್ಲಿ ನನ್ನನ್ನು ಅವಳ ಮುಂದೆಯೇ ಕೂಡಿಸಿಕೊಂಡು ಅಕ್ಷರಭ್ಯಾಸವನ್ನು ಕೂಡ ಮಾಡಿಸುತ್ತಿದ್ದಳು. ನನ್ನ ಅಮ್ಮ ಅಕ್ಷರ ಕಲಿತವಳಲ್ಲದಿದ್ದರೂ ನನಗೆ ಅಕ್ಷರಭ್ಯಾಸ ಮಾಡಿಸುತ್ತಿದ್ದ ರೀತಿಯಂತು ತುಂಬಾ ಅದ್ಭುತವಾದದ್ದು. ಅದನ್ನು ನಾನು ಇಂದಿಗೂ ಕೂಡ ಮರೆಯುವಂತಿಲ್ಲ. ನನಗೆ ಒಂದು ಅಂಕಲಿಪಿಯನ್ನು ಕೊಡಿಸಿದ್ದಳು. ಅದರಲ್ಲಿ ಕನ್ನಡ ಹಾಗು ಇಂಗ್ಲೀಷ ವರ್ಣಮಾಲೆಯ ಎಲ್ಲ ಅಕ್ಷರಗಳಿದ್ದವು. ಅದನ್ನು ಎದುರಿಗಿಟ್ಟುಕೊಂಡು ಬರೆಯುವಂತೆ ಹೇಳಿ, ತನ್ನೆದುರಿಗೆ ನನ್ನ ಕೂಡಿಸಿಕೊಂಡು ಬರೆಸುತ್ತಿದ್ದಳು. ನನಗೆ ವರ್ಣಮಾಲೆ ತಿದ್ದಿಸುತ್ತಾ–ತಿದ್ದಿಸುತ್ತಾ ಅವಳು ಕೂಡ 'ಅ ಮತ್ತು ಆ' ಎರಡು ಅಕ್ಷರಗಳನ್ನು ಕಲಿತುಕೊಂಡಿದ್ದಳು. ಏಕಕಾಲದಲ್ಲಿ ಅವಳು ಎರಡೆರಡು ಕಡೆಗೆ ಗಮನವನ್ನು ಹರಿಸುತ್ತಾ ಕೆಲಸ ಮಾಡಿರುವುದನ್ನು ಕಂಡರೆ ನನಗೆ ಆಶ್ಚರ್ಯವಾಗುತ್ತದೆ. ಚಿಂದಿ ಬಟ್ಟೆಗಳನ್ನು ಜೋಡಿಸಿ ಒಂದು ಸುಂದರ ಕೌದಿಯನ್ನು ಹೊಲೆಯುವ ಕೆಲಸವನ್ನು ಯಾವ ರೀತಿ ಅವಳಿಗೆ ಕರಗತವಾಗಿತ್ತೋ ಅದೆ ರೀತಿಯಾಗಿ ಮಕ್ಕಳ ಭವಿಷ್ಯವನ್ನು ಕೂಡ ಸುಂದರವಾಗಿ ರೂಪಿಸುವಂಥ ಕಲೆಯನ್ನು ಕೂಡ ನನ್ನ ತಾಯಿ ಕರಗತ ಮಾಡಿಕೊಂಡಿದ್ದಳು. ಈಗಲೂ ಕೂಡ ನನಗೆ ಎಂದಾದರೂ ಯಾವುದೇ ಸಮಸ್ಯೆ ಎದುರಾದಾಗ, ನನ್ನ ತಾಯಿಗೆ ಕೇಳಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತೇನೆ. ಹಾಗೆಯೇ ನನ್ನ ತಾಯಿ ಇಂದಿಗೂ ಕೂಡ ಇನ್ನು ಕೌದಿಯನ್ನು ಹೊಲಿಯುತ್ತಾಳೆ. ಆದರೆ ಈಗ ಮೊದಲಿನಂತೆ ತಿಂಗಳಿಗೊಂದರಂತೆ ಹೊಲಿದು ಮುಗಿಸಲಿಕ್ಕೆ ಆಗದಿದ್ದರೂ ಕೂಡ, ವರ್ಷಕ್ಕೆ ಎರಡು–ಮೂರು ಕೌದಿಗಳನ್ನು ಹೊಲಿಯುತ್ತಾಳೆ. ಹೋದ ವರ್ಷ ನನಗಾಗಿಯೇ ಒಂದು ಸುಂದರವಾಗಿರುವಂಥ ದೊಡ್ಡದಾಗಿರುವ ಒಂದು ಕೌದಿಯನ್ನು ಹೊಲೆದು ಕೊಟ್ಟಿದಾಳೆ. ಇವತ್ತಿಗೂ ಕೂಡ ನಾನು ಅದನ್ನೆ ಹೊದ್ದುಕೊಂಡು ಮಲಗುತ್ತೇನೆ. ಅವಳು ಹೊಲಿದ ಈ ಕೌದಿ ಯಾವ ಸೊಲ್ಲಾಪುರ ಚಾದರಿಗಿಂತಲೂ ಕಡಿಮೆಯಿಲ್ಲ.

***

## 21. ಶ್ರಮ

– *ಶಂಭಣ್ಣ ಕೂಡ್ಲಿಗಿ*

ನಾನು ಪಿ.ಯು.ಸಿ ಓದುತ್ತಲಿದ್ದ ಸಮಯವದು ನಾವು ವಾಸಿಸುತ್ತಿದ್ದದ್ದು ಒಂದು ಚಿಕ್ಕ ಓಣಿ, ಅಲ್ಲಿ ವಾಸವಾಗಿರುವ ಕುಟುಂಬಗಳೆಲ್ಲ ಒಂದಲ್ಲ ಒಂದು ರೀತಿಯಿಂದ ಸಂಬಂದಿಗಳಾಗಿದ್ದರು. ಆ ಸಮಯದಲ್ಲಿ ಮೂಕ್ಕಲು ಭಾಗದಷ್ಟು ಕುಟುಂಬಗಳು ವ್ಯವಸಾಯವನ್ನು ಮಾಡುತ್ತಿದ್ದವು, ಅವರ ಮನೆಗಳಲಿ ಬಂಡಿ, ಎತ್ತುಗಳು, ಆಕಳುಗಳು, ಎಮ್ಮೆಗಳನ್ನು ಸಾಕಿಕೊಂಡು ವವ್ಯಸಾಯದ ಜೋತೆಗೆ ಅವುಗಳ ಸಾಕಣಿಕೆ ಮತ್ತು ಅವುಗಳಿಂದ ತಮ್ಮ ಮನೆಗಳಿಗೆ ಸಾಕಾಗುವಷ್ಟು ಹೈನನ್ನು ಪಡೆದುಕೊಳ್ಳುತ್ತಿದ್ದರು. ಇನ್ನೂಳಿದ ಕುಟುಂಬಗಳು ಹೊಲಗಳಲ್ಲಿ, ಗದ್ದೆಗಳಲ್ಲಿ ಕೆಲಸ ಮಾಡಲಿಕ್ಕೆ ಹೋಗುತ್ತಿದ್ದರು. ಕೆವಲ ಬೆರಳೆಣಿಕೆಯಷ್ಟು ಕುಟುಂಬಗಳು ಮಾತ್ರ ಬೇರೆ ಬೇರೆ ಕೆಲಸಗಳಲ್ಲಿ ಅಥವಾ ವೃತ್ತಿಗಳಲ್ಲಿ ತಮ್ಮನ್ನ ತೋಡಗಿಸಿಕೊಂಡಿದ್ದರು. ಆ ಓಣಿಗೆ ಹೊಂದಿಕೊಂಡಂತೆ ಪ್ರಸಿದ್ದ ಶ್ರೀ ಗುರು ಬಸವೇಶ್ವರರ ದರ್ಬಾರ್ ಮಠವಿದ್ದು, ಆ ಮಠದ ಬಹು ಪಾಲು ಕಾರ್ಯಗಳಲ್ಲಿ ಈ ಓಣಿಯರೇ ಹೆಚ್ಚು ಪಾಲ್ಗೋಳ್ಳುತ್ತಿದ್ದರು. ಆ ಓಣಿಯ ಗಂಡಸರು ಪ್ರತಿ ದಿನ ಈ ಮಠದ ಸ್ವಾಮಿ ಶಿಕರದ ಮೇಲೆ ರೇಕಾರ್ಡ ಹಾಕಿದ ಕೂಡಲೇ ಬೆಳಿಗ್ಗೆ ಎದ್ದು ಅತ್ತುತ್ಸಹದಿಂದ ಎತ್ತುಗಳಿಗೆ, ದನಕರುಗಳಿಗೆ ಮೇವು ಹಾಕಿ, ಹೋಲಗಳಿಗೆ ರಂಟೆ ಹೊಡೆಯಲಿಕ್ಕೊ, ಹರಗಲಿಕ್ಕೋ, ಮಡಕೆ (ನೇಗಿಲು) ಹೊಡೆಯಲಿಕ್ಕೊ ಹೋಗುವವರು ತಮ್ಮ ಎತ್ತುಗಳಿಗೆ ಹುರುಳಿ ನುಚ್ಚೋ, ಹತ್ತಿಕಾಳುಗಳೋ, ಸಜ್ಜಿ ನುಚ್ಚೋ ಅಥವಾ ಮೆಕ್ಕೇ ಜೋಳದ ನುಚ್ಚೋ ಇಟ್ಟು ಮೇಯಿಸಿ ತಾವು ಮುಖ ತೋಳೆದುಕೊಂಡು ಚಾ ಕುಡಿಯಲು ಯಜಮಾನರುಗಳೆಲ್ಲ ಅಡ್ಡತೋಲೆಯವರ (ಅಡದಲ್ಲೇರ ಹೋಟೆಲ್) ಹೋಟೆಲ್ಗೆ ಹೋದರೆ, ಸ್ವಲ್ಪ ಮದ್ಯ ವಯಸ್ಕರರು ಹಾಗೂ ಕೋರಿ ಹುಡುಗರೆಲ್ಲ ಮಲ್ಲಿಕಪ್ಪನ ಹೋಟೆಲ್ಗೆ ಹೋಗಿ ಚಾ ಕುಡಿದು ಬೇಗ ಬಂದು ಸಗಣಿ ಬಳೆದು ಬಸವನ ಬಾವಿ ತಗ್ಗಿನ  ಅವರವರ ತಿಪ್ಪೆಗಳಿಗೆ ಹಾಕಿ ಬರುವುದೇ ಒಂದು ಸಡಗರ.

ಹೆಣ್ಣು ಮಕ್ಕಳು ಬೇಗ ಎದ್ದು ಸೋಮವಾರ ಅಥವಾ ಗುರುವಾರವಾಗಿದ್ದರೆ ನಾ ಮುಂದು ತಾ ಮುಂದು ಎನ್ನುವ ಹಾಗೆ ತಮ್ಮ ತಮ್ಮ ಅಂಗಳಗಳನ್ನು ಸಗಣಿಯಿಂದ ಸಾರಿಸಿ ರಂಗೋಲೆ ಹಾಕಿದರೆ ಈಡಿ ಓಣಿಯೇ ಒಂಥಾರ ಕಳೆಕಟ್ಟುತ್ತಿತ್ತು. ಮನೆ ಒಡತಿಯರೆಲ್ಲ ಚಾ (ಟೀ) ಮಾಡಿ ಮನೆಯವರೆಲ್ಲ ಒಂದೊಂದು ಗಳಾಸ ಚಾ ಕುಡಿದು ಅಡುಗೆ ಮನೆಗೆ ಒಳ ಹೋದರೆ ಸಾಕು 9. ಗಂಟೆಯಷ್ಟೋತ್ತಿಗೆ ಪುಟ್ಟಿ ರೊಟ್ಟಿ ಬಡಿದು, ಪಲ್ಯ, ಚಟ್ನಿ, ಸಾರು, ಅನ್ನ ಮಾಡಿ ಹೊರ ಬಂದು ಹೊಲಕ್ಕೆ ಹೊಗಲಿಕ್ಕೆ ರೆಡಿ ಮಾಡಿಕೊಂಡು, ಆಳುಗಳನ್ನ ಕರೆದು ತಲೆ ಮೇಲೆ ಎಡಿಗಿ ಬುತ್ತಿ ಹೊತ್ತುಕೊಂಡು, ದಾರಿಯಲ್ಲಿ ಉಣ್ಣಲಿಕ್ಕೇ ಕೈಯಲ್ಲೇ ರೊಟ್ಟಿ ಚಟ್ನಿ ಹಚ್ಚಿಕೊಂಡು ಹೊಲದಲ್ಲಿರುವವರ ಹೊಟ್ಟೆ ಹಸಿದಿರುತ್ತವೆ ಅಂತಾ ಅಂದುಕೊಂಡು ಹೋಗೊದೇ ಒಂದು ಸಡಗರ.

ಇತ್ತ ಗಂಡಸರು ಎತ್ತುಗಳನ್ನು ಮೇಯಿಸಿಕೊಂಡು ಬೆಳ್ಳಿಗ್ಗೆ ಬಂಡಿ ಹೂಡಿಕೊಂಡು ಹೋಲ ಗದ್ದೆಗಳಿಗೆ ಹರಗಲಿಕ್ಕೋ, ಮಡಿಕೆ ಹೋಡೆಯಲಿಕ್ಕೋ, ರಂಟೆ ಹೋಡೆಯಲಿಕ್ಕೋ ಹೋದವರು 9:30 ರಷ್ಟೋತ್ತಿಗೆ ಅವರ ಹೊಟ್ಟೆಗಳು ತಾಳ ಹಾಕುತ್ತಿರುತ್ತಿದ್ದವು ಹಾಗಾಗಿ ಬುತ್ತಿ ತರುವವರ ದಾರಿ ಕಾಯುತ್ತಲೇ ಗಳೆವುಗಳನ್ನು ಹೋಡೆಯುತ್ತಿರುತ್ತಿದ್ದರು. ಬುತ್ತಿ ತರುವವರು ದೂರದಲ್ಲಿ ಕಂಡರೆ ಸಾಕು ಅವರ ಮುಖಗಳು ಬಿರು ಬಿಸಿಲಿನಲ್ಲಿ ಹರಳುತ್ತಿದ್ದವು. ಎಲ್ಲರೂ ಮರದ ಅಡಿಗೋ, ಅಥವಾ ಬಂಡಿಯ ನೆರಳಲ್ಲೋ ಬುತ್ತಿ ಬಿಚ್ಚಿ ಊಟಕ್ಕೆ ಕೂತರೇ ಒಬ್ಬೋಬ್ಬರು 6–7 ರೊಟ್ಟಿ, ಹಸಿಮೆಣಸಿನ ಕಾಯಿ ಚಟ್ನಿ, ಈರಿಕಾಯೋ, ಬೆಂಡಿಕಾಯಿದೋ ಪಲ್ಯ, ಮೋಸರು, ಸುಟ್ಟ ಮೇಣಸಿನಕಾಯಿ, ಮೇಲೆ ಒಂದು ಹಚಿ ಉಳಗಡ್ಡಿ ಜಜ್ಜಿಕೊಂಡು ಉಂಡರೆಂದರೆ ಮತ್ತೇ 3–4 ಗಂಟೆಯವರೆಗೂ ಗಳೆವುಗಳನ್ನು ಕೊಳ್ಳು ಹರಿಯದೆ ಹೋಡೆಯುತ್ತಿದ್ದರು.  ನಂತರ ಸಾಯಂಕಾಲದವರೆಗೆ ಎತ್ತುಗಳನ್ನು ಮೇಯಿಸುತ್ತಿದ್ದರು.

ಇತ್ತ ಹೆಣ್ಣು ಮಕ್ಕಳು ಕಳೆ ತೆಗೆಯುವುದು, ಹತ್ತಿ ಬಿಡಿಸುವುದು, ಮನೆಯ ದನಕರುಗಳಿಗೆ ಮೇವು ಮಾಡುವುದು, ಒಲೆಯ ಬಾಯಿಗಳಿಗೆ ಕಟ್ಟಿಗೆಗಳನ್ನು ಹುಡುಕುವುದು, ಆಕಾರಿಕಿ ಸೊಪ್ಪು, ಗೊರ್ಜಿ ಸೊಪ್ಪು, ರಾಜಾಗಿರಿ ಸೊಪ್ಪು ಹುಡಿಕಿ ಉಡಿಯಲ್ಲಿ ಕಟ್ಟಿಕೊಳ್ಳುತ್ತಿದ್ದರು. ಸಾಯಂಕಾಲದವರೆಗೆ ಹೋಲ, ಗದ್ದೆಗಳಲ್ಲಿ ದುಡಿಯುತ್ತಿದ್ದರು. ಹೊತ್ತು ಮುಣುಗೋವಷ್ಟೋತ್ತಿಗೆ ಎಲ್ಲಾ ಹಣಿ ಮಾಡಿಕೊಂಡು ಬಂಡಿಯಲ್ಲಿ ಕುಳಿತು ಗಂಡ ಹೆಂಡತಿ ನಾಳೆಯ ಬಗ್ಗೆ ಮಾತಾನಾಡಿಕೊಳ್ಳುತ್ತಾ ಮನೆ ಸೇರುತ್ತಿದ್ದರು.

ಮನೆಗೆ ಬಂದ ಕೂಡಲೇ ಹೆಂಗಸರು ಹಾಲು ಕರೆದುಕೊಳ್ಳುವುದು, ನಾಳೆಯ ಕೆಲಸಗಳಿಗೆ ಅಣಿ ಮಾಡುವುದು, ಜೋಳ ಬಿಸಿಕೊಂಡು ಬರುವುದು, ರಾತ್ರಿಯ ಅಡುಗೆಗೆ ಅಣಿ ಮಾಡುವುದು ಮಾಡುತ್ತಿದ್ದರು. ಗಂಡಸರು ತಮ್ಮ ವವ್ಯಸಾಯದ ಪರಿಕರಗಳನ್ನ ನಾಳೆಗೆ ಜೋಡಿಸಿ ಕೋಳ್ಳುವುದು, ಹೆಚ್ಚಿನ ಗಳೆವುಗಳು ಬೇಕಿದ್ದರೆ, ಬೇರೆಯವರ ಗಳೆವುಗಳನ್ನು ಮಾಡುತ್ತಿದ್ದರು. ಇಲ್ಲಿ ಬೇರೆಯವರ ಗಳೆವುಗಳಿಗೆ ಬಾಡಿಗೆ (ಹಣ) ಪಡೆಯುತ್ತಿರಲಿಲ್ಲ, ಅವರ ಕೆಲವಿದ್ದಾಗ ಇವರುಗಳು ತಮ್ಮ ಎತ್ತುಗಳ ಸಮೇತ ಹೋಗಿ ಕೆಲಸ ಮಾಡಿ ಮುಟ್ಟಿಸುತ್ತಿದ್ದರು.

ಇವತ್ತು ಆ ಓಣಿಯನ್ನು ನೋಡಿದರೆ ಅಯ್ಯೋ ಅನ್ನಿಸುತ್ತದೆ. ಯಾಕೆಂದರೆ ಇಡೀ ಓಣಿಯನ್ನು ಜಾಲಾಡಿದರು ಒಂದೋ ಎರಡೋ ಕುಟುಂಬಗಳು ಎತ್ತು, ದನ ಕರ ಕಟ್ಟಿಕೊಂಡು ವವ್ಯಸಾಯ ಮಾಡುತ್ತಿದ್ದರೆ. ಅಲವಾರು ಕುಟುಂಬಗಳು ಹೋಲಗಳನ್ನು ಮಾರಿಕೊಂಡು ಬಂದ ಹಣದಲ್ಲಿ ಹೊಸ ಮನೆಗಳನ್ನು ಕಟ್ಟಿಸಿಕೊಂಡು, ಅರಮನೆಗಳಲ್ಲಿ ಬಿಕಾರಿಗಳಂತೆ ಜಿವಿಸುತ್ತಿದ್ದಾರೆ, ಓಣಿಗೆಲ್ಲಾ ಕಾಡು ಹರಿಗಳನ್ನು ಮುನ್ಸಿಪಾಲಿಟಿಯವರು ಹೊಂದಿಸಿಕೊಟ್ಟಿದ್ದರಿಂದ ನೆಲ ಸಾರಿಸುವುದು ದೂರವಾಯ್ತು ರಂಗೋಲಿ ಹಾಕುವುದೆ ಮರೆತು ಹೋಗಿದ್ದಾರೆ. ಮನೆ ಮನೆಗಳಲ್ಲಿ ಟಿ ವಿ ಗಳು ಬಂದು ಎಲ್ಲಾರ ಬಾಯಿಗಳಲ್ಲಿ ಧಾರವಾಯಿಗಳು ನಲಿದಾಡುತ್ತವೆ, ತಮ್ಮ ಮನೆಯ ಬಗ್ಗೇ ಯೋಚಿಸದೆ ಆ ಧಾರವಾಯಿಗಳಲ್ಲಿ ಬರುವ ಕುಟುಂಬಗಳ ಬಗ್ಗೆ ಚಿಂತಿಸುವವರು ಹೆಚ್ಚಾಗಿದ್ದಾರೆ. ಗಂಡಸರೋ ಅಂದು ಓ ಸಿ ಎಂದರೆ ದೂರಸರಿಯುತ್ತಿದ್ದವರು, ಓಪನ್ನಿಗೆ ಊಟವಿಲ್ಲ ಇಲ್ಲ ಕ್ಲೋಸ್ಗೆ ನಿದ್ದೆ ಇಲ್ಲದಂತೆ ಆಡುತ್ತಿದ್ದಾರೆ, ಇನ್ನೂ ಆ ಓಣಿಯ ಹುಡುಗರೋ ಪುಂಡ ಪೋಕರಿಗಳಾಗಿ ಅಂಡಾಲೇಯುತ್ತಿದ್ದಾರೆ. ಬೇವಿನ ಕಟ್ಟೆಗಳು, ಮಠದ ಕಟ್ಟೆಗಳು ಸವೆದು ಹೋಗುವಂತೆ ಕುಳಿತು ಊರಿನವರ ಬಗ್ಗೆ ಮಾತಾಡಿಕೊಳ್ಳುತ್ತಿದ್ದಾರೆ. ಇದೆಲ್ಲದಕ್ಕೂ ಕಾರಣ ಯಂತ್ರಗಳು ಮಾನವನು ನಿರ್ವಾಹಿಸುವ ಹಲವಾರು ಕಲಸಗಳನ್ನು ಯಂತ್ರಗಳೆ ಇಂದು ಮಾಡುತ್ತಿವೆ. ಅಷ್ಟೆ ಅಲ್ಲ ಯಂತ್ರಗಳನ್ನು ಹೊಂದುವವರು ದುಡ್ಡು

ಇರುವಂತವರುಗಳು ಹಾಗಾಗಿ ಸಣ್ಣ ಪುಟ್ಟ ರೈತರುಗಳು ಇವತ್ತು ವ್ಯವಸಾಯ ಮಾಡಲಿಕ್ಕೆ ಆಗದ ಪರಿಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಆನರ ಬದುಕನ್ನೇ ಕಸಿದು ಕೊಳ್ಳುವಷ್ಟರ ಮಟ್ಟಿಗೆ ಯಂತ್ರಗಳು ತಲೆ ಎತ್ತಿ ನಿಂತಿವೆ ಈಗಲೇ ಎಲ್ಲರೂ ಎಚ್ಚೇತ್ತು ಕೊಂಡರೆ ಉತ್ತಮ ಇಲ್ಲವಾದರೆ ಮುಂದಿನ ಜೀವನವನ್ನ ಊಹಿಸುವುದು ಕಷ್ಠವಾಗುತ್ತದೆ.

ಇವೆಲ್ಲದಕ್ಕೇ ಪೂರಕವೆನ್ನುವಂತಹ ಸರ್ಕಾರದ ಯೋಜನೆಗಳು, ಗ್ರಾಮಪಂಚಾಯ್ತಿ, ಪಟ್ಟಣ ಪಂಚಾಯ್ತಿ, ರಾಜ್ಯಸಭಾ, ಲೋಕಸಭಾ ಎಲೆಕ್ಷನ್ಗಳು. ಯಾವೋನೋ ನಾಲ್ಕು ದುಡ್ಡು ಇದ್ದವನ ಹಿಂದೆ ನಾಯಿ ತಿರುಗಿದಂತೆ ತಿರುಗಿ ಅವರ ಕೆಲಗಳಿಗೆ ಇವರ ಚಪ್ಪಲಿ ಸವೆಸಿಕೊಂಡು ರಾತ್ರಿಗೆ ಸ್ವಲ್ಪ ಟೈಟಾಗಿ ಜಗಳ ಮಾಡುವುದು ಸಾಮಾನ್ಯವಾಗಿದೆ. ಇದು ಕೇವಲ ಒಂದು ಓಣಿ ಕತೆಯೆಲ್ಲ ಇದೆ ರೀತಿ ಬೇರೆ ಬೇರೆ ಓಣಿಗಳು, ಬೇರೆ ಬೇರೆ ಊರುಗಳ ಇವೆ ಮುಂದೊಂದು ದಿನ ಶ್ರಮ ಪಡಬೇಕು ಅಂದರೂ ಪಡಲಿಕ್ಕೆ ಆಗದವರಾಗುವುದರಲ್ಲಿ ಯಾವುದೆ ಅನುಮಾನಗಳಿಲ್ಲ.

ಗಾಂದೀಜಿಯವರು ಭಾರತ ಹಳ್ಳಿಗಳಿಂದ ಕೂಡಿದ ರಾಷ್ಟ್ರ ಹಾಗಾಗಿ ಹಳ್ಳಿಗಳನ್ನು ಉದ್ದಾರ ಮಾಡಿ ಎನ್ನುತ್ತಿದ್ದರು. ಆದರೆ ಇವತ್ತು ಹಳ್ಳಿಗಳಿಂದ ಜನರನ್ನು ಹೋಡಿಸುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಹಾಗಾಗಿ ನಾವೇಲ್ಲ ಯೋಚಿಸಿ ಮುನ್ನಡೆಯಬೇಕಾಗಿದೆ.

***

## 22. Cool Clicks

– ***Guru Moger***




**Bayalu Coordinators:**

1. **Gulbarga: Gundappa Katekar:** *gundappa.katekar@azimpremjifoundation.org*
2. **Mandya: Ravi B T:** *ravi@azimpremjifoundation.org*
3. **Bangalore: Raghavendra Herle:** *Raghavendra.herle@azimpremjifoundation.org*
4. **Yadgir: Rajashri Nayak**: *rajashri.nayak@azimpremjifoundation.org*